
ಇಪ್ಪತ್ತರ ಹೊಸ್ತಿಲಲ್ಲಿ

ದೆಹಲಿ ಕರ್ನಾಟಕ ಸಂಘದ

# ಅಭಿಮತ

ಜುಲೈ 2010
ಬೆಲೆ ರೂ. 1.




## ದೆಹಲಿಯಲ್ಲೊಂದು ಕಾರ್ಕಳದ ಶಿಲ್ಪ

Every City is My City!

with

KBL
Multi Branch Banking

KBL
Multi City Cheque

Operate your account across the country

Reach your account from anywhere in the country




Karnataka Bank Ltd.
Your Family Bank. Across India.

Regd. & Head Office: Mangalore - 575 002

E-mail: info@ktkbank.com Visit us at: www.karnatakabank.com

**ಪ್ರಧಾನ ಸಂಪಾದಕರು**
ವಸಂತ ಶೆಟ್ಟಿ ಬೆಳ್ಳಾರೆ

**ಸಂಪಾದಕ ಮಂಡಳಿ**
ಮಹಾಬಲೇಶ್ವರ ಭಟ್ ಕೆ.
ಸಂತೋಷ್ ಕುಮಾರ್ ಉಪಾಧ್ಯಾಯ
ಡಾ. ಸುಮಂಗಲಾದೇವಿ
ನಂದಿನಿ ಮಲ್ಯ
ಸಾಮ್ರಾಟ್ ಗೌಡ
ಸರೋಜಾ ವಿಜಯಕುಮಾರ್

**ದೆಹಲಿ ಕರ್ನಾಟಕ ಸಂಘದ**
**ಕಾರ್ಯಕಾರಿ ಸಮಿತಿ**
**ಅಧ್ಯಕ್ಷರು**
ಸಿ.ವಿ. ಗೋಪಿನಾಥ್

**ಉಪಾಧ್ಯಕ್ಷರು**
ವಸಂತ ಶೆಟ್ಟಿ ಬೆಳ್ಳಾರೆ
ಉಷಾ ಭರತಾದ್ರಿ

**ಪ್ರಧಾನ ಕಾರ್ಯದರ್ಶಿ**
ಆರ್. ರೇಣುಕುಮಾರ್

**ಖಜಾಂಚಿ**
ಎಂ.ವಿ. ವೆಂಕಟೇಶ್

**ಜಂಟಿ ಕಾರ್ಯದರ್ಶಿಗಳು**
ಎನ್.ಆರ್. ಶ್ರೀನಾಥ್
ಡಾ. ಹೇಮಲತಾ ಮೂರ್ತಿ

**ಸಮಿತಿ ಸದಸ್ಯರು**
ಅಂಜನಿ ಗೌಡ
ಹರಿಶ್ಚಂದ್ರ ಬಂಟ್ವಾಳ್
ಟಿ.ಎಂ. ಮೈಲಾರಪ್ಪ
ವಿ.ವಿ. ಬಿರಾದಾರ
ಸಿ.ಆರ್. ಶ್ರೀನಿವಾಸ
ಕೆ.ಎಸ್.ಜಿ. ಶೆಟ್ಟಿ
ರಾಧಾಕೃಷ್ಣ
ಭಂಡಾರ್‌ಕರ್ ಎಸ್.ಎಲ್
ಇಸ್ಮಾಯಿಲ್ ಬುಡಂದಿ
ಬಿ.ಆರ್.ಮಹಾಲಿಂಗಪ್ಪ

**DELHI KARNATAKA SANGHA**
Sector-12, R K Puram,
New Delhi-110022.
Phone: 011-26109615. 011-65643615
email:dksangha@gmail.com

ಅಭಿಮತ
ಸಂಪುಟ 20 ಸಂಚಿಕೆ 10
ಜುಲೈ 2010, ಬೆಲೆ ರೂ. 1

## ನಿಮ್ಮೊಂದಿಗೆ

ಇತ್ತೀಚೆಗೆ ಕರ್ನಾಟಕದ ಬೃಹತ್ ಕೈಗಾರಿಕಾ ಸಚಿವರಾದ ಶ್ರೀ ಮುರುಗೇಶ್ ನಿರಾಣಿ ಅವರು Advantage Karnataka ಜಾಥಾ ಆರಂಭಿಸಿ ರಾಜಧಾನಿ ದೆಹಲಿಯೂ ಸೇರಿದಂತೆ ದೇಶದಾದ್ಯಂತ ಇರುವ ಮಹೋನ್ನತ ಉದ್ಯಮಿಗಳನ್ನು ಕರ್ನಾಟಕಕ್ಕೆ ಬನ್ನಿ ಎಂದು ಕರೆದರು. ಜೊತೆಗೆ ಜಪಾನ್, ಚೀನಾ, ಅಮೆರಿಕಾ ಸೇರಿದಂತೆ ಹೊರ ದೇಶಗಳಲ್ಲಿ ಇರುವ ಉದ್ಯಮಿಗಳು, ಅದರಲ್ಲೂ ಭಾರತೀಯರು ಮತ್ತು ಕನ್ನಡಿಗ ಉದ್ಯಮಿಗಳನ್ನು 'ತಾಯ್ನಾಡಿಗೆ ಬನ್ನಿ, ಬಂಡವಾಳ ಹೂಡಿ' ಎಂದು ಮನವಿ ಮಾಡಿದರು.

ಇದೊಂದು ಸಚಿವರ ಪ್ರಾಮಾಣಿಕ ಪ್ರಯತ್ನ. 2010ರ ಜೂನ್ 3 ಮತ್ತು 4ರಂದು ಬೆಂಗಳೂರಲ್ಲಿ ಆಯೋಜಿಸಲಾದ ಜಾಗತಿಕ ಬಂಡವಾಳ ಹೂಡಿಕೆದಾರರ ಸಮಾವೇಶ ಅಭೂತಪೂರ್ವ ಯಶಸ್ಸು ಕಂಡಿದೆ.

ರಾಷ್ಟ್ರದ ಐದು ಪ್ರಮುಖ ಕೈಗಾರಿಕೀಕೃತ ರಾಜ್ಯಗಳಲ್ಲಿ ಕರ್ನಾಟಕವು ಒಂದಾಗಿದೆ. ವಿವಿಧ ವಲಯಗಳಲ್ಲಿ ಬಂಡವಾಳ ಹೂಡಿಕೆಗಾಗಿ ರಾಜ್ಯದಲ್ಲಿ ವಿಫುಲ ಅವಕಾಶಗಳಿವೆ. ಹಾಗೆಯೇ, ರಾಜ್ಯದಲ್ಲಿ ಲಭ್ಯವಿರುವ ವಿಫುಲ ನೈಸರ್ಗಿಕ ಸಂಪನ್ಮೂಲ, ನೈಪುಣ್ಯ, ಮಾನವ ಸಂಪನ್ಮೂಲ, ಉತ್ತಮ ಮೂಲಭೂತ ಸೌಕರ್ಯ, ಶಾಂತಿಯುತ ಕೈಗಾರಿಕಾ ವಾತಾವರಣ ಹಾಗೂ ಕ್ರಿಯಾಶೀಲ ಸರ್ಕಾರ ರಾಜ್ಯವನ್ನು ಬಂಡವಾಳ ಹೂಡಿಕೆದಾರರ ನೆಚ್ಚಿನ ತಾಣವನ್ನಾಗಿಸಿದೆ.

ದೇಶ ವಿದೇಶಗಳ ಬಂಡವಾಳ ಹೂಡಿಕೆದಾರರಲ್ಲಿ ಕರ್ನಾಟಕದಲ್ಲಿರುವ ವಿಫುಲ ಅವಕಾಶಗಳ ಬಗ್ಗೆ ಅರಿವು ಮೂಡಿಸುವಲ್ಲಿ ಈ ಸಮಾವೇಶ ಯಶಸ್ವಿಯಾಗಿದೆ.

ರಾಜ್ಯದಲ್ಲಿ ಏರೋಸ್ಪೇಸ್, ಖನಿಜ, ಪ್ರವಾಸೋದ್ಯಮ, ಜೈವಿಕ ತಂತ್ರಜ್ಞಾನ, ಆಟೋಮೊಬೈಲ್, ಮಾಹಿತಿ ತಂತ್ರಜ್ಞಾನ, ಮೂಲಭೂತ ಸೌಕರ್ಯ, ವಿದ್ಯುತ್, ಆಹಾರ ಸಂಸ್ಕರಣ, ಜವಳಿ, ಆರೋಗ್ಯ ಸೇವೆಗಳ ಶಿಕ್ಷಣ ಮುಂತಾದವು ಬಂಡವಾಳ ಹೂಡಿಕೆಯ ಪ್ರಮುಖ ಕ್ಷೇತ್ರಗಳಾಗಿವೆ.

ಈ ಸಮಾವೇಶದಲ್ಲಿ ಒಟ್ಟು 7600 ಪ್ರತಿನಿಧಿಗಳು ಭಾಗವಹಿಸಿದ್ದರೆ, 3900 ಕಂಪನಿಗಳು ಸಹಭಾಗಿಗಳಾಗಿದ್ದರು, 18 ವಿವಿಧ ದೇಶಗಳ ಮತ್ತು ಭಾರತದ ಒಕ್ಕೂಟದ 21 ರಾಜ್ಯಗಳು ಸಮಾವೇಶದಲ್ಲಿ ಭಾಗವಹಿಸಿ ಕಳೆಕಟ್ಟಿದವು. ವಿವಿಧ ಸಂಸ್ಥೆಗಳು ಕರ್ನಾಟಕ ಸರ್ಕಾರದೊಂದಿಗೆ ಬಂಡವಾಳ ಹೂಡಿಕೆ ಮಾಡಲು ಮುಂದೆ ಬಂದಿದ್ದು, ಅದರಲ್ಲಿ 383 ಸಂಸ್ಥೆಗಳು ಕರ್ನಾಟಕದಲ್ಲಿ ಐದು ಲಕ್ಷ ಕೋಟಿ ರೂ.ಗಳ ಬಂಡವಾಳ ಹೂಡಿಕೆಗೆ ಒಪ್ಪಂದಕ್ಕೆ ಸಹಿ ಹಾಕಿದವು.

ಕರ್ನಾಟಕದಲ್ಲಿ ಶೀಘ್ರದಲ್ಲೇ ತಲೆ ಎತ್ತಲಿರುವ ಈ ಉದ್ಯಮದಿಂದ ಸುಮಾರು ನಾಲ್ಕು ಲಕ್ಷ ಜನರಿಗೆ ಉದ್ಯೋಗ ಅವಕಾಶವಾಗಲಿದೆ. ಈ ಯಶಸ್ಸಿನ ಹಿಂದೆ ಸ್ವತಃ ಉದ್ಯಮಿಗಳಾಗಿರುವ ಮುರುಗೇಶ್ ನಿರಾಣಿ ಹಾಗೂ ಅವರ ಆಡಳಿತ ವರ್ಗ ಹಗಲು ರಾತ್ರಿ ದುಡಿದಿದ್ದಾರೆ. ಅವರನ್ನು ಕನ್ನಡಿಗರು ಅಭಿನಂದಿಸಬೇಕು. ರಾಜ್ಯದ, ದೇಶದ ಪ್ರಗತಿಯ ವಿಷಯದಲ್ಲಿ ನಾವೆಲ್ಲಾ ಒಂದು ಎನ್ನುವಂತೆ ಕೇಂದ್ರ ಕಾನೂನು ಸಚಿವ ವೀರಪ್ಪ ಮೊಯಿಲಿ, ಕಾರ್ಮಿಕ ಸಚಿವ ಮಲ್ಲಿಕಾರ್ಜುನ ಖರ್ಗೆ, ಸಚಿವ ಸುಭೋದ್‌ಕಾಂತ್ ಸಹಾಯ್ ಮತ್ತಿತರರು ಉಪಸ್ಥಿತರಿದ್ದು ಸಹಾಯ ಹಸ್ತ ನೀಡಿರುವುದು ಕರ್ನಾಟಕದ ಬೆಳವಣಿಗೆಗೆ ಸಂಕೇತ.

ಇದಲ್ಲದೆ, ರಾಜ್ಯದಲ್ಲಿ ಕೈಗಾರಿಕಾ ಅಭಿವೃದ್ಧಿಗೆ ಪೂರಕವಾಗಿ ಬಂಡವಾಳ ಹೂಡಿಕೆದಾರರಿಗೆ ಪ್ರೋತ್ಸಾಹ ನೀಡುವ ಹಲವಾರು ಕಾರ್ಯಕ್ರಮಗಳನ್ನು ಸರ್ಕಾರ ಪ್ರಾರಂಭಿಸಿದೆ. ನೂತನ ಕೈಗಾರಿಕಾ ನೀತಿ ಜಾರಿ; ಕೈಗಾರಿಕಾ ಅಭಿವೃದ್ಧಿಗಾಗಿ ವಿಷನ್ ಗ್ರೂಪ್ ರಚನೆ; ಹೊಸ ಕೈಗಾರಿಕೆಗಳಿಗೆ ತೆರಿಗೆ ವಿನಾಯ್ತಿ ಹಾಗೂ ಹಿಂದುಳಿದ ಪ್ರದೇಶದಲ್ಲಿ ಕೈಗಾರಿಕೆಗಳನ್ನು ಆರಂಭಿಸುವ ಕಂಪನಿಗಳಿಗೆ ತೆರಿಗೆ ವಿನಾಯ್ತಿ ಮತ್ತು ಸಬ್ಸಿಡಿ ನೀಡಿಕೆ; ರಾಜ್ಯದಲ್ಲಿ ಹಸಿರು ಕೈಗಾರಿಕೆಗಳಿಗೆ ಪ್ರೋತ್ಸಾಹ ನೀಡಿಕೆ ಮುಂತಾದ ಕೆಲಸಗಳು ಜಾಗತಿಕ ಬಂಡವಾಳ ಹೂಡಿಕೆದಾರರ ಸಮಾವೇಶದ ಹಿನ್ನೆಲೆಯಲ್ಲಿ ಕೈಗೂಡಿವೆ.

ಇಂಥ ಜನಪ್ರಿಯ ಕಾರ್ಯಕ್ರಮಗಳು ನಡೆದಿರುವುದನ್ನು ನಾವು ದೂರದಿಂದಲೇ ನೋಡಿ ಆನಂದಿಸುವಂತಾಗಿದೆ.

ಸಚಿವ ಮುರುಗೇಶ್ ನಿರಾಣಿಯವರು ಕರ್ನಾಟಕಕ್ಕೆ ಬನ್ನಿ ಎಂದು ಆಹ್ವಾನಿಸಿದಂತೆ ದೆಹಲಿಯಲ್ಲಿ ನೆಲೆನಿಂತ ಕನ್ನಡಿಗರು ಎಲ್ಲೆಲ್ಲಿ ಉದ್ಯೋಗಾವಕಾಶವಿದೆ ಎಂಬುದನ್ನು ಕಂಡುಕೊಂಡು 'ನಮ್ಮೂರಿಗೆ ಬನ್ನಿ' ಎಂದು ನಮ್ಮವರನ್ನು ಆಮಂತ್ರಿಸಬೇಕು. ಇದು ಕೇವಲ ಉದ್ಯಮಕ್ಕೆ ಸೀಮಿತವಾಗದೆ ಉದ್ಯೋಗಕ್ಕೂ ಅನ್ವಯವಾಗಬೇಕು. ಎಲ್ಲೆಲ್ಲಿ ಉದ್ಯೋಗ ಅವಕಾಶಗಳಿವೆ ಅಲ್ಲಿ ನಾವೂ ನಮ್ಮೂರಿನ ಕನ್ನಡಿಗರನ್ನು ಕರೆತಂದು ಉದ್ಯೋಗ ಕೊಡಿಸುವ ಪ್ರಕ್ರಿಯೆ ಆರಂಭಿಸಬೇಕು. ಹೊರನಾಡ ಕನ್ನಡಿಗರಿಗೆ ರಾಜ್ಯದ ಉದ್ಯೋಗಾವಕಾಶದಲ್ಲಿ ವಿಶೇಷ ಅವಕಾಶ ನೀಡಬೇಕು ಮತ್ತು ಅವರಲ್ಲಿ ಸ್ಕಿಲ್ ಡೆವಲಪ್‌ಮೆಂಟ್‌ಗೆ ಸರ್ಕಾರ ವಿಶೇಷ ಪ್ರಯತ್ನ ಮಾಡಬೇಕು. ಈ ಮೂಲಕ ಕನ್ನಡಿಗರ ಪ್ರಗತಿ ಕಾಣಬಹುದಾಗಿದೆ.

— **ವಸಂತ ಶೆಟ್ಟಿ ಬೆಳ್ಳಾರೆ**
ಪ್ರಧಾನ ಸಂಪಾದಕರು

# ದೆಹಲಿ ಕರ್ನಾಟಕ ಸಂಘ

ಡಾ. ಜಿ.ಎ. ಬಿರಾದಾರ ಅವರ

## ಮುಂಬಯಿ ಕರ್ನಾಟಕದಲ್ಲಿ ಸವಿನಯ ಕಾನೂನು ಭಂಗ ಚಳವಳಿ

(ಅಭಿರುಚಿ ಪ್ರಕಾಶನ, ಮೈಸೂರು)

**ಪುಸ್ತಕ ಬಿಡುಗಡೆ**

**ದಿನಾಂಕ: 18.07.2010, ಸಾಯಂಕಾಲ 5.00 ಗಂಟೆಗೆ**

ಸ್ಥಳ : ಸಂಘದ ಸಭಾಂಗಣ

**ಮುಖ್ಯ ಅತಿಥಿ**

**ಶ್ರೀ ಅಗ್ರಹಾರ ಕೃಷ್ಣಮೂರ್ತಿ**

ಕಾರ್ಯದರ್ಶಿ, ಕೇಂದ್ರ ಸಾಹಿತ್ಯ ಅಕಾಡೆಮಿ

**ಪುಸ್ತಕದ ಕುರಿತು**

**ಡಾ. ಪುರುಷೋತ್ತಮ ಬಿಳಿಮಲೆ**

ನಿರ್ದೇಶಕರು, ಅಮೆರಿಕನ್ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯನ್ ಸ್ಟಡೀಸ್



**ಸಾಂಸ್ಕೃತಿಕ ಕಾರ್ಯಕ್ರಮ – ಯಕ್ಷಗಾನ**

## ಜಗಜ್ಯೋತಿ ಬಸವೇಶ್ವರ ಚರಿತ್ರೆ

ನಾಟ್ಯಶ್ರೀ ಕಲಾ ತಂಡ(ರಿ), ಶಿವಮೊಗ್ಗ, ಇವರಿಂದ

ತಮಗೆಲ್ಲರಿಗೂ ಆದರದ ಸ್ವಾಗತ



ಸಿ ವಿ. ಗೋಪಿನಾಥ್
ಅಧ್ಯಕ್ಷರು

ಆರ್.ರೇಣುಕುಮಾರ್
ಪ್ರಧಾನ ಕಾರ್ಯದರ್ಶಿ

# ದೆಹಲಿ ಕರ್ನಾಟಕ ಸಂಘ

**ನಾಟ್ಯಶ್ರೀ ಕಲಾ ತಂಡ, ಸಾಗರ, ಶಿವಮೊಗ್ಗ**

ಇವರಿಂದ

**ಪೌರಾಣಿಕ ಯಕ್ಷಗಾನ**




## ಹನುಮಾರ್ಜುನ

ದಿನಾಂಕ : 19.07.2010

ಸಮಯ : ಸಂಜೆ 7 ಗಂಟೆಗೆ

ಸ್ಥಳ : ಸಂಘದ ಸಭಾಂಗಣ



**ತಮಗೆಲ್ಲರಿಗೂ ಆದರದ ಸ್ವಾಗತ**

ಸಿ ವಿ. ಗೋಪಿನಾಥ್
ಅಧ್ಯಕ್ಷರು

ಆರ್.ರೇಣುಕುಮಾರ್
ಪ್ರಧಾನ ಕಾರ್ಯದರ್ಶಿ

# ದೆಹಲಿ ಕರ್ನಾಟಕ ಸಂಘ

ಪ್ರಸ್ತುತಪಡಿಸುವ

ದಿನಕರ ತಂಡದ ನಾಟಕ

## 'ನಾ–ಸತ್ತಿಲ್ಲ' ದ ಪ್ರದರ್ಶನ

ಹಾಗೂ ನಾಟಕದ ಬಗ್ಗೆ ಚರ್ಚೆ

ಚರ್ಚೆಯಲ್ಲಿ ಭಾಗವಹಿಸುವವರು :

ಡಾ. ಪುರುಷೋತ್ತಮ ಬಿಳಿಮಲೆ, ಪ್ರೊ. ಎಚ್.ಎಸ್. ಶಿವಪ್ರಕಾಶ್, ಶ್ರೀ ನರಸಿಂಹ ಮೂರ್ತಿ (ರಿಜಿಸ್ಟ್ರಾರ್, ಕರ್ನಾಟಕ ನಾಟಕ ಅಕಾಡೆಮಿ)
ಡಾ. ಕೃಷ್ಣ ಕೊಲ್ಹಾರ ಕುಲಕರ್ಣಿ (ನಾಟಕದ ಲೇಖಕರು) ಹಾಗೂ ಇತರ ರಂಗ ತಜ್ಞರು

ದಿನಾಂಕ: 01.08.2010, ಸಾಯಂಕಾಲ 4.00 ಗಂಟೆಗೆ

ಸ್ಥಳ : ಸಂಘದ ರಂಗಮಂಚ

ತಮಗೆಲ್ಲರಿಗೂ ಆದರದ ಸ್ವಾಗತ

ಸಿ ವಿ. ಗೋಪಿನಾಥ್
ಅಧ್ಯಕ್ಷರು

ಆರ್.ರೇಣುಕುಮಾರ್
ಪ್ರಧಾನ ಕಾರ್ಯದರ್ಶಿ

(ಕಾರ್ಯಕ್ರಮಕ್ಕೆ 10 ನಿಮಿಷ ಮುಂಚಿತವಾಗಿ ಬಂದು ಆಸೀನರಾಗಿ, ನಾಟಕವನ್ನು ಆನಂದಿಸಿ, ಚರ್ಚೆಯಲ್ಲಿ ಪಾಲ್ಗೊಳ್ಳಿ. . . )

---

# ದೆಹಲಿ ಕರ್ನಾಟಕ ಸಂಘ

### ಅಮರ ಜ್ಯೋತಿ ಕಲಾ ಬಳಗ, ರಾಮನಗರ

### ಇವರಿಂದ ಪೌರಾಣಿಕ ನಾಟಕ

## "ಶ್ರೀ ಕೃಷ್ಣ ಸಂಧಾನ"

ದಿನಾಂಕ: 31.07.2010, ಸಾಯಂಕಾಲ 5.00 ಗಂಟೆಗೆ

ಸ್ಥಳ : ಸಂಘದ ಸಭಾಂಗಣ


ತಮಗೆಲ್ಲರಿಗೂ ಆದರದ ಸ್ವಾಗತ

ಸಿ ವಿ. ಗೋಪಿನಾಥ್
ಅಧ್ಯಕ್ಷರು

ಆರ್.ರೇಣುಕುಮಾರ್
ಪ್ರಧಾನ ಕಾರ್ಯದರ್ಶಿ

ಪುಸ್ತಕ ವಿಮರ್ಶೆ

# “ನಾನು ಕಂಡ ನನ್ನ ದೇಶ” ಕೃತಿಯ ಬಗ್ಗೆ ಕೆಲವು ಮಾತುಗಳು




ಎಂಬತ್ತರ ದಶಕದ ಉತ್ತರಾರ್ಧ ಮತ್ತು ತೊಂಬತ್ತರ ದಶಕದ ಪೂರ್ವಾರ್ಧ ರಾಷ್ಟ್ರದ ರಾಜಕಾರಣದಲ್ಲಿ ಒಂದು ಸಂಕ್ರಮಣ ಕಾಲ. ಆ ದಿನಗಳಲ್ಲಿ ಆಂತರಿಕವಾಗಿ ಕೋಮುವೈಷಮ್ಯ, ವಿಫಲ ಸಮ್ಮಿಶ್ರ ರಾಜ-ಕಾರಣ ಮತ್ತು ಆರ್ಥಿಕ ಸಂಕಷ್ಟಗಳು ರಾಷ್ಟ್ರವನ್ನು ಕಾಡಿದರೆ ಅಂತರರಾಷ್ಟ್ರೀಯ ರಂಗದಲ್ಲಿ ಕುಸಿದುಬಿದ್ದ ಕಮ್ಯೂನಿಸ್ಟ್ ವ್ಯವಸ್ಥೆ ಮತ್ತು ತತ್ಪರಿಣಾಮದಿಂದಾಗಿ ಅನಾವರಣಗೊಳ್ಳತೊಡಗಿದ ಹೊಸ ಜಾಗತಿಕ ವ್ಯವಸ್ಥೆಯಲ್ಲಿ ತನ್ನ ಸ್ಥಾನವನ್ನು ಗುರುತಿಸಿಕೊಳ್ಳಲು ಭಾರತ ಹೆಣಗುತ್ತಿತ್ತು. ಅಂತಹ ಗೊಂದಲಮಯ ದಿನಗಳಲ್ಲಿ ರಾಷ್ಟ್ರವನ್ನಾಳಿದ ನಾಲ್ವರು ಪ್ರಧಾನಮಂತ್ರಿಗಳ ಆಡಳಿತಾವಧಿಯಲ್ಲಿ ದೇಶದ ಪ್ರಧಾನ ವಾರ್ತಾಧಿಕಾರಿಯಾಗಿ ಹಾಗೂ ಮಾಧ್ಯಮ ಸಲಹೆಗಾರರಾಗಿ ಕಾರ್ಯ ನಿರ್ವಹಿಸುವುದರ ಮೂಲಕ ರಾಷ್ಟ್ರದ ಆಂತರಿಕ ಹಾಗೂ ಬಾಹ್ಯ ರಾಜಕಾರಣದ ಆಗುಹೋಗುಗಳಿಗೆ ಸಾಕ್ಷಿಯಾಗಿ ನಿಂತ ಶ್ರೀ ಇನ್ನ ರಾಮಮೋಹನ ರಾವ್ ಅವರ ಅನುಭವ ಹಾಗೂ ಅನುಭಾವಗಳು ಅನಾವರಣಗೊಂಡಿರುವ ಅವರ ಲೇಖನ ಸಂಕಲನ “ನಾನು ಕಂಡ ನನ್ನ ದೇಶ” ಒಂದು ಆಸಕ್ತಿಪೂರ್ಣ ಕೃತಿ.


ಇಂಗ್ಲೀಷಿನಿಂದ ಕನ್ನಡಕ್ಕೆ ಅನುವಾದಗೊಂಡಿರುವ ಇಪ್ಪತ್ತಾರು ಲೇಖನಗಳ ಸಂಕಲನ ಈ ಕೃತಿ. ರಾಷ್ಟ್ರದ ಪ್ರಥಮ ಪ್ರಧಾನಮಂತ್ರಿ ಪಂಡಿತ ಜವಾಹರ್‌ಲಾಲ್ ನೆಹರೂ ಅವರ ಜತೆಗಿನ ಸಾಂಗತ್ಯವನ್ನು ನೆನಪಿಸಿಕೊಳ್ಳುವುದರ ಮೂಲಕ ತಮ್ಮ ಲೇಖನಮಾಲೆಯನ್ನು ಆರಂಭಿಸುವ ಶ್ರೀ ರಾವ್ ಅವರು ನಂತರದ ಬರಹಗಳಲ್ಲಿ ಅನೇಕ ಮುಖ್ಯ ವಿಷಯ, ವ್ಯಕ್ತಿಗಳ ಬಗ್ಗೆ ಬರೆಯುತ್ತಾರೆ. ನಮ್ಮ ಧುರೀಣರ ಅವಿವೇಕತನದಿಂದಾಗಿ ಉತ್ಪನ್ನವಾದ ಖಾಲಿಸ್ಥಾನ್ ಭಯೋತ್ಪಾದನೆ, ಆಪರೇಶನ್ ಬ್ಲೂಸ್ಟಾರ್, ಭಾರತ-ಪಾಕಿಸ್ತಾನ್ ಯುದ್ಧಗಳು ಮುಂತಾದ ಆಸಕ್ತಿಕರ ವಿಷಯಗಳು ಅವರ ಲೇಖನಿಯಿಂದ ಹೊರಹೊಮ್ಮಿವೆ. ಶ್ರೀ ರಾವ್ ಅವರ ಬರಹಗಳ ವಿಶಿಷ್ಟತೆ ಎಂದರೆ ರಾಜಕೀಯ ನಾಯಕರ ಎರಡೂ ಮುಖಗಳನ್ನು ಪರಿಚಯಿಸುವ ಅವರ ರೀತಿ. 1971ರ ಬಾಂಗ್ಲಾದೇಶ್ ಯುದ್ಧದಲ್ಲಿ ಅಪಾರ ವಿವೇಕ ಮತ್ತು ಮುತ್ಸದ್ದಿತನವನ್ನು ಪ್ರದರ್ಶಿಸಿದ ಶ್ರೀಮತಿ ಇಂದಿರಾಗಾಂಧಿಯವರು ನಂತರ ಬಿಂದ್ರಾಂವಾಲೆಯಂತಹ ರಾಷ್ಟ್ರಕಂಟಕನನ್ನು ಸೃಷ್ಟಿಸುವಂತಹ ಅವಿವೇಕದ ಮಾರ್ಗ ಹಿಡಿದದ್ದು ಶ್ರೀ ರಾವ್ ಅವರ ಬರಹಗಳಲ್ಲಿ ಸಮರ್ಥವಾಗಿ ಚಿತ್ರಿತಗೊಂಡಿದೆ. ಹಾಗೆಯೇ ಪಂಜಾಬ್, ಅಸ್ಸಾಂ ಮತ್ತು ಶ್ರೀಲಂಕಾದಲ್ಲಿ ಶಾಂತಿ ಸ್ಥಾಪನೆಗಾಗಿ ಪ್ರಾಮಾಣಿಕ ಪ್ರಯತ್ನ ನಡೆಸಿದ ರಾಜೀವ್ ಗಾಂಧಿಯವರನ್ನು ಶ್ಲಾಘಿಸುತ್ತಲೇ ಪತ್ರಿಕಾಗೋಷ್ಠಿಯೊಂದರಲ್ಲಿ ಅವರು ನೀಡಿದ ಒಂದು ವಿವೇಚನಾರಹಿತ ಹೇಳಿಕೆಯನ್ನೂ ಶ್ರೀ ರಾವ್ ದಾಖಲಿಸುತ್ತಾರೆ. ಹೀಗೆ ಶ್ರೀ ರಾವ್ ಅವರು ವ್ಯಕ್ತಿ ವಿಷಯಗಳ ವಿಭಿನ್ನ ಮಗ್ಗುಲುಗಳನ್ನು ಪರಿಚಯಿಸುತ್ತಾ ಹೋಗುವುದನ್ನು ಪುಸ್ತಕದ ಉದ್ದಕ್ಕೂ ಕಾಣಬಹುದು.

ಆದಾಗ್ಯೂ, ಇಪ್ಪತ್ತಾರು ಲೇಖನಗಳ ಈ ಕೃತಿಯನ್ನು ಓದುವ ಮೊದಲು ಅತಿಯಾದ ನಿರೀಕ್ಷೆಯನ್ನು ಇಟ್ಟುಕೊಳ್ಳದಂತಹ ಒಂದು ವಾಸ್ತವವಾದೀ ನಿಲುವನ್ನು ಓದುಗ ಹೊಂದಿರಬೇಕಾದ ಅಗತ್ಯವಿದೆ. ಮಹತ್ವಪೂರ್ಣ ಕಾಲಘಟ್ಟವೊಂದರಲ್ಲಿ ಮಹತ್ವಪೂರ್ಣ ಸ್ಥಾನವೊಂದನ್ನು ನಿಭಾಯಿಸಿದ ಶ್ರೀ ರಾವ್ ಅವರಿಂದ ಇದುವರೆಗೆ ತೆರೆಮರೆಯಲ್ಲೇ ಉಳಿದುಹೋಗಿರುವ ಅನೇಕ “ರಹಸ್ಯ”ಗಳು ಅನಾವರಣಗೊಳ್ಳಬಹುದೆಂಬ ನಿರೀಕ್ಷೆ ಸಹಜವೇ. ಆದರೆ ಭಾರತ – ಪಾಕಿಸ್ತಾನ್ ಯುದ್ಧಗಳು, ಶ್ರೀಲಂಕಾ ಅಂತರ್ಯುದ್ಧ, ಭಾರತೀಯ ಸೇನೆ, ಅದರ ದಂಡನಾಯಕರಾದ ಜನರಲ್ ಕಾರಿಯಪ್ಪ, ಜನರಲ್ ತಿಮ್ಮಯ್ಯ, ಜನರಲ್ ಮಾನೇಕ್‌ಶಾ, ಆಪರೇಷನ್ ಬ್ಲೂಸ್ಟಾರ್ ಮುಂತಾದ ಹಲವಾರು ಮಹತ್ವಪೂರ್ಣ ಘಟನೆಗಳು ಮತ್ತು ವ್ಯಕ್ತಿಗಳ ಬಗ್ಗೆ ಶ್ರೀ ರಾವ್ ಅವರ ಲೇಖನಗಳಲ್ಲಿ ಯಾವ ‘ರಹಸ್ಯ’ಗಳೂ ಸ್ಫೋಟಗೊಳ್ಳುವುದಿಲ್ಲ. ಇದಕ್ಕೆ ಸ್ಪಷ್ಟ ಕಾರಣಗಳಿವೆ. ವಿಪರ್ಯಾಸವೆಂದರೆ ಮಹತ್ವಪೂರ್ಣ ಬೆಳವಣಿಗೆಗಳಿಗೆ ಶ್ರೀ ರಾವ್ ಅವರನ್ನು ಸಾಕ್ಷಿಯಾಗಿಸಿದ ಅವರ ಸ್ಥಾನವೇ ಅವರ ಅಭಿವ್ಯಕ್ತಿ ಸ್ವಾತಂತ್ರಕ್ಕೆ ಕಡಿವಾಣ ಹಾಕಿಬಿಟ್ಟಿದೆ. ಈ ‘ಕಡಿವಾಣ’ದ ಸೂಚನೆ ಅವರು ಶ್ರೀ ಹೆಚ್. ವೈ. ಶಾರದಾಪ್ರಸಾದ್ ಅವರ ಬಗ್ಗೆ ಬರೆದಿರುವ ಲೇಖನದಲ್ಲಿ ಸ್ಪಷ್ಟವಾಗಿ ದೊರೆಯುತ್ತದೆ. ಶ್ರೀಮತಿ ಇಂದಿರಾಗಾಂಧಿ ಮತ್ತು ಶ್ರೀ ರಾಜೀವ್ ಗಾಂಧಿಯವರಿಗೆ ಮಾಹಿತಿ ಸಲಹೆಗಾರರಾಗಿದ್ದ ಗೌರವಾನ್ವಿತ ಕನ್ನಡಿಗರಾದ ಶ್ರೀ ಶಾರದಾ ಪ್ರಸಾದ್ ಅವರ ಬಗ್ಗೆ ಶ್ರೀ ರಾವ್ ಅವರು ಹೇಳುವ ಒಂದು ವಿಷಯವನ್ನು ಅವರ ಮಾತಿನಲ್ಲೇ ಉಲ್ಲೇಖಿಸುತ್ತೇನೆ:

“ಅವರು ನಿವೃತ್ತಿ ಹೊಂದಿದ ನಂತರ ಅವರು ಸಾಕ್ಷಿಯಾಗಿದ್ದ ಮಹತ್ತರ ಘಟನೆಗಳ ಒಳಗಿನ ಕಥೆಗಳನ್ನೇಕೆ ಅವರು ಬರೆಯುತ್ತಿಲ್ಲ ಎಂದು ಕೇಳಿದ್ದಕ್ಕೆ ಅವರು ಸರಕಾರದ ಸಂವಹನಕಾರನಾಗಿ ಒಬ್ಬನು ಅನೇಕ ಘಟನೆಗಳಿಗೆ ಸಾಕ್ಷಿಯಾಗುತ್ತಾನೆ ಎಂದರು. ನಾವು ಸರಕಾರದ ಗೋಪ್ಯಗಳನ್ನು ಕಾಪಾಡಿಕೊಂಡು ಬಾರದಿದ್ದರೆ ಸಂವಹನಕಾರರ ಮೇಲೆ ನಂಬಿಕೆ ಕಳೆದುಕೊಂಡು ಸರಕಾರವು ನಮಗೆ ಗೌಪ್ಯ ಸಂಗತಿಗಳನ್ನು ತಿಳಿಸುವಲ್ಲಿ ಹಿಂಜರಿಯಬಹುದು ಎಂದರು.”

ಶ್ರೀ ರಾವ್ ಅವರ ಲೇಖನಗಳಲ್ಲಿ ನಮಗೆ ಈಗ ತಿಳಿದಿರುವ ಸಂಗತಿಗಳ ಹೊರತಾಗಿ ಹೊಸದೇನೂ ತಿಳಿಯುವುದಿಲ್ಲವೇಕೆ ಎಂಬುದನ್ನು ಮೇಲಿನ ಮಾತುಗಳ ಹಿನ್ನೆಲೆಯಲ್ಲಿ ಅರ್ಥ ಮಾಡಿಕೊಳ್ಳಬೇಕು. ಶ್ರೀ ರಾವ್ ಅವರು ತಮಗೆ ತಿಳಿದಿರುವ ಅಪಾರ ವಿಷಯ ವಿಚಾರಗಳಲ್ಲಿ ಅತ್ಯಲ್ಪವನ್ನು ಮಾತ್ರ ಹೊರಗೆಡಹುವ ಅನಿವಾರ್ಯತೆಗೆ ಸಿಕ್ಕಿಬಿದ್ದಿದ್ದಾರೆ ಎಂಬ ಸತ್ಯವನ್ನು ನಾವು ನೆನಪಿನಲ್ಲಿಟ್ಟುಕೊಳ್ಳಬೇಕು. ಹೀಗಾದರೆ ಮಾತ್ರ ನಾವು ಶ್ರೀ ರಾವ್ ಅವರ ಲೇಖನಗಳ ಮಹತ್ವವನ್ನು ಅರಿಯಲು ಸಾಧ್ಯವಾಗುತ್ತದೆ. ಈ ಕೃತಿಯಲ್ಲಿನ ವಿಷಯಗಳು ನಮಗೀಗಾಗಲೇ ತಿಳಿದಿವೆ ಎಂಬ ನಕಾರಾತ್ಮಕ ನಿಲುವನ್ನು ತೊರೆದು “ಈಗಾಗಲೇ ತಿಳಿದಿರುವ ವಿಷಯಗಳಿಗೆ ಸಂಬಂಧಿಸಿದಂತೆ ಶ್ರೀ ರಾವ್ ಅವರ ಲೇಖನಗಳನ್ನು corraborative evidence ಆಗಿ ಉಪಯೋಗಿಸಿಕೊಳ್ಳಬಹುದು ಎಂಬ ಸಕಾರಾತ್ಮಕ ನಿಲುವನ್ನು ತಳೆದು ಈ ಪುಸ್ತಕವನ್ನು ಓದಲು ಕೈಗೆತ್ತಿಕೊಳ್ಳುವುದು ಉಚಿತ. ಹೀಗೆ ಮಾಡಿದರೆ ಮಾತ್ರ ಸಹೃದಯೀ ಹಿರಿಯರೊಬ್ಬರನ್ನು ಸರಿಯಾಗಿ ಅರ್ಥ ಮಾಡಿಕೊಳ್ಳಲು ಹಾಗೂ ಅವರ ಕೃತಿಗೆ ತಕ್ಕ ನ್ಯಾಯ ಒದಗಿಸಲು ನಾವು ಸಮರ್ಥರಾಗುತ್ತೇವೆ. ಅಷ್ಟೇ ಅಲ್ಲ, “ನಾನು ಕಂಡ ನನ್ನ ದೇಶ” ಕೃತಿಯನ್ನು ಸಮಕಾಲೀನ ಭಾರತದ ಆಂತರಿಕ ಮತ್ತು ವಿದೇಶನೀತಿಯ ಬಗ್ಗೆ ಒಂದು ಆಕರ ಗ್ರಂಥವಾಗಿ ವಿದ್ಯಾರ್ಥಿಗಳು ಮತ್ತು ಸಂಶೋಧಕರು ಬಳಸಿಕೊಳ್ಳಬಹುದೆಂಬ ಸತ್ಯವೂ ನಮಗೆ ಮನವರಿಕೆಯಾಗುತ್ತದೆ.

ಹಲವು ಬಗೆಯಲ್ಲಿ ಉಪಯುಕ್ತವಾದ ಈ ಕೃತಿಯ ಪ್ರಮುಖ ದೋಷವೆಂದರೆ ಅಸಮರ್ಪಕ ಅನುವಾದ. ಅಸಂಬದ್ಧ ಹಾಗೂ ದೋಷಪೂರ್ಣ ವಾಕ್ಯರಚನೆ ಮೊದಲ ಲೇಖನದ ಮೊದಲನೇ ವಾಕ್ಯದಲ್ಲೇ ಕಾಣಿಸಿಕೊಂಡು ನಂತರ ಕೃತಿಯ ಉದ್ದಕ್ಕೂ ಕಲ್ಲುಹರಳಿನಂತೆ ಒತ್ತುತ್ತಾ ಸಾಗುತ್ತದೆ. ಕೃತಿಯ ಎರಡನೆಯ ಆವೃತ್ತಿಯನ್ನು ಹೊರತರುವಾಗ ಅನುವಾದಕರು ಮತ್ತು ಸಂಪಾದಕರು ಮತ್ತಷ್ಟು ಜವಾಬ್ದಾರಿಯುತವಾಗಿ ಕಾರ್ಯ ನಿರ್ವಹಿಸುವ ಅಗತ್ಯವಿದೆ.



**ಪ್ರೇಮಶೇಖರ**

ಬೀಳ್ಕೊಡುಗೆ

# ವೀರಣ್ಣ ಕಮ್ಮಾರ ಬೆಂಗಳೂರಿಗೆ



ಅದೆಷ್ಟೋ ಕನ್ನಡಿಗರು ತಮ್ಮ ಉದ್ಯೋಗನಿಮಿತ್ತ ದೆಹಲಿಗೆ ಬಂದು ಪುನಃ ಕರ್ನಾಟಕಕ್ಕೆ ತೆರಳುತ್ತಾರೆ. ಅವರು ಬಂದಿದ್ದು ಹೋಗಿದ್ದು ದೆಹಲಿಯ ಕನ್ನಡಿಗರಿಗೆ ಗೊತ್ತೇ ಆಗುವುದಿಲ್ಲ. ಇದಕ್ಕೆ ವಿಪರ್ಯಾಸವೆಂದರೆ ವೀರಣ್ಣ ಕಮ್ಮಾರ. ದೆಹಲಿಯ ಕರ್ನಾಟಕ ವಾರ್ತಾ ಇಲಾಖೆಯ ಕಛೇರಿಯಲ್ಲಿ ಪ್ರಭಾರ ಉಪನಿರ್ದೇಶಕರಾಗಿ ಕೆಲಸ ಮಾಡುತ್ತಿದ್ದ ಇವರು ಈಗ ವರ್ಗಾವಣೆಗೊಂಡು ಬೆಂಗಳೂರಿಗೆ ತೆರಳಿದ್ದಾರೆ. ಹಿಂದೆ ಅದೆಷ್ಟೋ ಜನ ಹೀಗೆ ಬಂದು ಹೋಗಿದ್ದಾರೆ. ಆದರೆ ಎಲ್ಲ ಕನ್ನಡಿಗರಿಗೆ ಪರಿಚಯರಾಗಿದ್ದು ಮಾತ್ರ ಇವರು.

**18.07.2010ರಂದು ಸಾಯಂಕಾಲ 6 ಗಂಟೆಗೆ ಶ್ರೀ ವೀರಣ್ಣ ಕಮ್ಮಾರ ಅವರಿಗೆ ದೆಹಲಿ ಕರ್ನಾಟಕ ಸಂಘದಿಂದ ಆತ್ಮೀಯ ಬೀಳ್ಕೊಡುಗೆ ಸಮಾರಂಭವಿದೆ. ತಮಗೆಲ್ಲ ಆತ್ಮೀಯ ಸ್ವಾಗತ**

ಇವರು ದೆಹಲಿ ಕನ್ನಡಿಗರಿಗೆ ಮೊದಲು ಪರಿಚಯವಾಗಿದ್ದು ದೆಹಲಿ ಕರ್ನಾಟಕ ಸಂಘ 2007ರಲ್ಲಿ ಆಯೋಜಿಸಿದ್ದ ಏಕಾಂಕ ನಾಟಕ ಸ್ಪರ್ಧೆಯ ನಾಟಕ ನಿರ್ದೇಶನದೊಂದಿಗೆ. ಪ್ರಥಮ ಬಾರಿಗೇ ತಾವು ನಿರ್ದೇಶಿಸಿದ ನಾಟಕಕ್ಕೆ ಪ್ರಥಮ ಬಹುಮಾನವನ್ನು ಪಡೆಯುವಲ್ಲಿ ಸಫಲರಾದರು. ಅಂದಿನಿಂದ ಇಂದಿನವರೆಗೂ ನಾಟಕಗಳನ್ನು ನಿರ್ದೇಶಿಸುತ್ತಾ, ತಾವೇ ಸ್ವತಃ ಅಭಿನಯ ಮಾಡುತ್ತಾ ದೆಹಲಿಯ ಕನ್ನಡಿಗರ ಮನದಾಳದಲ್ಲಿ ಉಳಿದಿದ್ದಾರೆ. ದೆಹಲಿಯ ಪರಿಧಿಗೆ ಆವರಿಸಿಕೊಂಡಿರುವ ಗುರುಗಾಂವ್, ಫರಿದಾಬಾದ್, ನೋಯ್ಡಾಗಳಲ್ಲಿ ಕೂಡಾ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮಗಳನ್ನು ಆಯೋಜಿಸಿ ಇವರು ಪರಿಚಿತರಾಗಿದ್ದಾರೆ. ಜೊತೆಗೆ ಚಂಡೀಗಢದಲ್ಲೂ ಕೂಡ ಕರ್ನಾಟಕ ರಾಜ್ಯೋತ್ಸವ ಕಾರ್ಯಕ್ರಮವನ್ನು ಅದ್ದೂರಿಯಾಗಿ ಆಯೋಜಿಸಿ, ಅಲ್ಲಿಗೂ ದೆಹಲಿಯ ಕನ್ನಡಿಗರ ಮಕ್ಕಳನ್ನು ಕರೆದುಕೊಂಡು ಹೋಗಿ 'ನಾಟಕ' ಪ್ರಸ್ತುತಪಡಿಸಿದರು.

ಅಲ್ಲದೇ, ಬೆಂಗಳೂರಿನಿಂದ ರಂಗಭೂಮಿಯ ನಿರ್ದೇಶಕರನ್ನು ಕರೆಯಿಸಿ ದೆಹಲಿಯ ಕನ್ನಡಿಗರ ಮಕ್ಕಳಿಗೆ ತರಬೇತಿ ನೀಡಿ ಇಲ್ಲಿನ ಮಕ್ಕಳಿಗೆ ಕನ್ನಡದ ನಾಡು, ನುಡಿ, ಭಾಷೆಗಳ ಬಗ್ಗೆ ಪ್ರೀತಿ, ಅಭಿಮಾನ ಮೂಡಲು ಪ್ರಯತ್ನಪಟ್ಟರು. 2008ರಲ್ಲಿ ಶ್ರೀಮತಿ ಸುಜಾತಾ ಅವರು ಬರೆದ ಗೀತನಾಟಕ 'ಕೊಳಲು-ನವಿಲು' ಮತ್ತು 2009ರಲ್ಲಿ ನ್ಯಾಷನಲ್ ಸ್ಕೂಲ್ ಆಫ್ ಡ್ರಾಮಾದ 'ಥಿಯೇಟರ್ ಇನ್ ಎಜುಕೇಷನ್'ನ ಶಿಕ್ಷಕಿ ಹಾಗೂ ರಂಗಕರ್ಮಿ ಶ್ರೀಮತಿ ವೀಣಾ ಶರ್ಮಾ ಅವರಿಂದ 'ಗೋಡೆ' ಎಂಬ ನಾಟಕವನ್ನು ಸಿದ್ಧಪಡಿಸಿ, ದೆಹಲಿಯ ಕನ್ನಡಿಗರಿಗೆ ನೀಡಿದ್ದಾರೆ. ಈ ನಾಟಕಗಳಲ್ಲಿ ಕನ್ನಡ ಓದಲು ಬರೆಯಲು ಬಾರದ ದೆಹಲಿ ಕನ್ನಡಿಗರ ಮಕ್ಕಳೂ ಭಾಗವಹಿಸಿದ್ದರು ಎಂಬುದು ಇಲ್ಲಿ ಗಮನಾರ್ಹ.

ಇವರು ಬರೀ ನಾಟಕ ಪ್ರೇಮಿ ಮಾತ್ರವಲ್ಲ ಬರವಣಿಗೆಯ ಹವ್ಯಾಸವನ್ನು ಕೂಡಾ ಇಟ್ಟುಕೊಂಡಿದ್ದಾರೆ. ಇವರ 18 ಸಣ್ಣ ಕತೆಗಳು ಪ್ರಜಾವಾಣಿ, ಮಯೂರ, ಸುಧಾ ಹಾಗೂ ಇನ್ನಿತರ ಪತ್ರಿಕೆಗಳಲ್ಲಿ ಪ್ರಕಟಗೊಂಡಿವೆ. ಶ್ರೀಮತಿ ಅಚಲಾ ಮೌಲಿಕ್ ಅವರು ಬರೆದ 'ಪುಸ್ಕಿನ್' ನಾಟಕವನ್ನು ಹಾಗೂ ಅರುಣ್ ಶೌರಿ ಅವರು ಬರೆದ 'ಇಂಡಿಯನ್ ಕಾಂಟ್ರವರ್ಸಿಸ್' ಪುಸ್ತಕವನ್ನು ಕನ್ನಡಕ್ಕೆ ಅನುವಾದಿಸುತ್ತಿದ್ದಾರೆ.

ಅವರು 1998 ರಿಂದ 2005ರ ವರೆಗೆ ಪ್ರಜಾವಾಣಿಯ ಬೆಂಗಳೂರು ವರದಿಗಾರರಾಗಿ ಸುಮಾರು ಆರೂವರೆ ವರ್ಷಕಾಲ ಕೆಲಸ ಮಾಡಿ ಪತ್ರಿಕಾರಂಗದಲ್ಲಿ ತಮ್ಮ ಛಾಪನ್ನು ಮೂಡಿಸಿದ್ದಾರೆ. ಈ ಅವಧಿಯಲ್ಲಿ 'ಪ್ರಜಾವಾಣಿ' ಮಾತ್ರವಲ್ಲದೆ ಇತರ ಪತ್ರಿಕೆಗಳಲ್ಲೂ ಅವರ 450ಕ್ಕೂ ಮೀರಿದ ಲೇಖನಗಳು ಪ್ರಕಟವಾಗಿವೆ. ಈ ಲೇಖನಗಳು ಕೃಷಿ, ರಾಜಕೀಯ, ಪತ್ರಿಕೋದ್ಯಮ ಇತ್ಯಾದಿ ಸಮಾಜದ ವಿಭಿನ್ನ ರಂಗಗಳನ್ನು ಪ್ರತಿಬಿಂಬಿಸುವ ಕೆಲಸವನ್ನು ಮಾಡಿವೆ.

ತಮ್ಮ ಕಾರ್ಯಾವಧಿಯಲ್ಲಿ ಒಬ್ಬ ಉತ್ತಮ ಸಾರ್ವಜನಿಕ ಸಂಪರ್ಕಾಧಿಕಾರಿಯಾಗಿ ಹೆಸರು ಗಳಿಸಿದ್ದಾರೆ. ಸುದ್ದಿ ಸಂಗ್ರಹ, ಮಾಧ್ಯಮ ಸಂಪರ್ಕ, ಸುದ್ದಿ ಮಾಧ್ಯಮಗಳ ಜತೆಗೆ ವಿಭಿನ್ನ ಕಾರ್ಯಕ್ರಮಗಳ ಸಂಯೋಜನೆ, ಸಾರ್ವಜನಿಕ ಸಂಪರ್ಕ ಕಾರ್ಯಕ್ರಮಗಳ ಆಯೋಜನೆ ಇತ್ಯಾದಿ ವಿಭಿನ್ನ ರೀತಿಯ ಚಟುವಟಿಕೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ.

ವೀರಣ್ಣ ಕಮ್ಮಾರ ಬಸವಣ್ಣಪ್ಪ ಮತ್ತು ತಾರಾಮತಿಯವರ ಸುಪುತ್ರ. ಬೆಳಗಾವಿ ಜಿಲ್ಲೆಯ ಬೈಲಹೊಂಗಲ ತಾಲೂಕಿನ ಮಲಪ್ರಭಾ ನದಿ ದಂಡೆಯಲ್ಲಿರುವ ಹೊಳೆಹೊಸೂರು ಇವರ ಸ್ವಗ್ರಾಮ. ಮೈಸೂರು ವಿಶ್ವವಿದ್ಯಾಲಯದಿಂದ ಪತ್ರಿಕೋದ್ಯಮ, ರಾಜ್ಯಶಾಸ್ತ್ರ ಹಾಗೂ ಅರ್ಥಶಾಸ್ತ್ರದಲ್ಲಿ ಬಿ.ಎ. ಪದವಿ ಗಳಿಸಿದ ಇವರು ಬೆಂಗಳೂರು ವಿಶ್ವವಿದ್ಯಾಲಯದಿಂದ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ಸ್ನಾತಕೋತ್ತರ ಪದವಿಗಳಿಸಿದ್ದಾರೆ.

ಇವರಿಗೆ ದೆಹಲಿ ಕನ್ನಡಿಗರ ಪರವಾಗಿ ಅಭಿಮತ ಶುಭವನ್ನು ಹಾರೈಸುತ್ತದೆ.

## ಮುನ್ನೋಟ

ಆತ್ಮೀಯ ಕನ್ನಡಿಗರೇ,

ಮೇ, ಜೂನ್ ರಜಾ ಅವಧಿಯಲ್ಲಿ ಬಹಳಷ್ಟು ಕನ್ನಡಿಗರು ತಮ್ಮ ಸ್ವಗ್ರಾಮಗಳಿಗೆ ತೆರಳುವುದರಿಂದ ದೆಹಲಿಯಲ್ಲಿ ಕನ್ನಡಿಗರ ಸಂಖ್ಯೆ ಬಹಳಷ್ಟು ಕಡಿಮೆ ಹಾಗೂ ಈ ಅವಧಿಯಲ್ಲಿ ದೆಹಲಿಯಲ್ಲಿ ಅತೀವ ಬೇಸಿಗೆಯಿರುವುದರಿಂದ ಕಾರ್ಯಕ್ರಮಗಳ ಆಯೋಜನೆಯಲ್ಲಿ ಕಡಿಮೆಯಾಗಿರುತ್ತದೆ. ಆದರೆ ನಾವು ನಿಮಗೆ ಭರವಸೆಯಂತೆ ಮುಂದಿನ ದಿನಗಳಲ್ಲಿ ಅತ್ಯುತ್ತಮ ಹಲವಾರು ಜನಪ್ರಿಯ ಕಾರ್ಯಕ್ರಮಗಳನ್ನು ಆಯೋಜಿಸಲಿದ್ದೇವೆ. ಇದೇ ತಿಂಗಳ 18ರಂದು ಬಡಗು ತಿಟ್ಟು ಯಕ್ಷಗಾನದೊಂದಿಗೆ ಪ್ರಾರಂಭವಾಗುವ ಈ ಕಾರ್ಯಕ್ರಮಗಳ ಸರಣಿಯಲ್ಲಿ 31ನೇ ತಾರೀಖು ದೆಹಲಿಯಲ್ಲಿ ಪ್ರಪ್ರಥಮ ಬಾರಿಗೆ ಸಂಪೂರ್ಣ ಪೌರಾಣಿಕ ನಾಟಕ, ನಂತರ ಕನ್ನಡ ಚಿತ್ರರಂಗದ ಹಲವಾರು ಖ್ಯಾತ ಹಾಸ್ಯ ನಟರುಗಳ ನಗೆ ಹಬ್ಬ ಕಾರ್ಯಕ್ರಮವನ್ನು ಸಹ ಆಯೋಜಿಸಲು ಉದ್ದೇಶಿಸಿದೆ. ತಮ್ಮ ಸಹಾಯ-ಸಹಕಾರ ಹಾಗೂ ಪ್ರೋತ್ಸಾಹವನ್ನು ನಿರೀಕ್ಷಿಸುವ..

**ಆರ್.ರೇಣುಕುಮಾರ್, ಪ್ರಧಾನ ಕಾರ್ಯದರ್ಶಿ**

## ಉಚಿತ ವೈದ್ಯಕೀಯ ತಪಾಸಣೆ

ಪ್ರತಿ ತಿಂಗಳ ಕೊನೆಯ ಭಾನುವಾರದಂದು ಡಾ. ಭೀಮಭಟ್ ಅವರಿಂದ ಉಚಿತ ವೈದ್ಯಕೀಯ ತಪಾಸಣೆ ನಡೆಯಲಿದೆ. ದೆಹಲಿ ಕನ್ನಡಿಗರು ಈ ವೈದ್ಯಕೀಯ ಸೇವೆಯನ್ನು ಸದುಪಯೋಗಪಡಿಸಿ ಕೊಳ್ಳಬೇಕಾಗಿ ವಿನಂತಿ.

— ಪ್ರಧಾನ ಕಾರ್ಯದರ್ಶಿ




## ಓದುಗರ ಪತ್ರ

‘ಅಭಿಮತ’ ಮೇ 2010ರ ಪುಟ 10,11ರಲ್ಲಿ “ಕನ್ನಡದ ಹೆಮ್ಮೆ ಭಾರತ ರತ್ನ ಸರ್. ಎಂ.ವಿ. ಅವರ ಮೂರ್ತಿ ರಾಜಧಾನಿಯಲ್ಲಿ" ಎಂಬ ಲೇಖನದಲ್ಲಿ ಅವರ ಬಗ್ಗೆ ತಾವು ಬರೆದಿರುವ ಅವರ ಜೀವನದಲ್ಲಿ ಹಲವಾರು ಅಂಶಗಳನ್ನು ಓದಿ, ಹಲವು ಅಂಶಗಳನ್ನು ತಿಳಿದುಕೊಂಡು ಸಂತೋಷವಾಯಿತು. ಅದಕ್ಕಾಗಿ ತಮಗೆ ನನ್ನ ಧನ್ಯವಾದಗಳು.

ಅವರ ಹಾಗೂ ನನ್ನ ವೈಯಕ್ತಿಕ ಪರಿಚಯ ಸಂಬಂಧಗಳು : 1. 1950ರಲ್ಲಿ ನಾನು ವ್ಯವಸಾಯ ಕಾಲೇಜ್ ವಿದ್ಯಾರ್ಥಿಯಾಗಿ ಸರ್. ಎಂ. ವಿಶ್ವೇಶ್ವರಯ್ಯ ಭೇಟಿ, ಚರ್ಚೆ, ಅನುಭವ. 2. 1962ರಲ್ಲಿ ನಿಧನರಾದಾಗ ಅವರ ಶವಯಾತ್ರೆಗೆ ಕೈಗೊಂಡ ಏರ್ಪಾಟು. 3. 1960–69ರಲ್ಲಿ ಪಿ.ಎಚ್. ಡಿ. ಡಾ. ಗಾಡ್ಗೀಳ್ ಮುಡೇನ್ ಹಳ್ಳಿಗೆ ಭೇಟಿ. 4. ಆ ಊರಿನ ಅಭಿವೃದ್ಧಿಗಾಗಿ ಶ್ರಮಿಸಿದ ಅನುಭವ ನನ್ನ ಪುಣ್ಯ.

2010ರ ಜೂನ್ ‘ಅಭಿಮತ’ ಪತ್ರಿಕೆ ನನಗೆ ಮಾಮೂಲಾಗಿ ತಲುಪಿದೆ. ಇದರಲ್ಲಿ ಜಗಜ್ಯೋತಿ ಬಸವಣ್ಣನವರ ನಿಮ್ಮ ಲೇಖನ ಓದಿದ್ದೇನೆ. ತುಂಬಾ ಸಂತೋಷ.

ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾದವರು ಬಸವಣ್ಣ ಇರುವ ನಾಣ್ಯ ಬಿಡುಗಡೆ ಮಾಡಿದಂತೆ ಇದೇ ಸೆಪ್ಟೆಂಬರ್‌ನಲ್ಲಿ ನಡೆಯುವ 150ನೇ ಹುಟ್ಟುಹಬ್ಬದ ಸಂದರ್ಭದಲ್ಲಿ ಸರ್.ಎಂ. ವಿಶ್ವೇಶ್ವರಯ್ಯರವರ ನಾಣ್ಯ ಬಿಡುಗಡೆ ಮಾಡಿದರೆ ಕನ್ನಡಿಗರೆಲ್ಲರಿಗೂ ಬಹಳ ಆನಂದ. ನಾನು ತಾ. 25.06.2010ರ ನನ್ನ 85ನೇ ಹುಟ್ಟು ಹಬ್ಬದ ವಿವಿಧ ಧಾರ್ಮಿಕ ಕಾರ್ಯಗಳಲ್ಲಿ ನಿರತನಾಗಿದ್ದೇನೆ.

**–■ ವಿ.ಡಿ. ವೀರಕ್ಯಾತಯ್ಯ, IAS, Retd. ಬೆಂಗಳೂರು**

ಜೂನ್ 2010ರ ‘ಅಭಿಮತ’ ತಲುಪಿತು. ಕಳೆದ ವರ್ಷ ಅಭಿಮತಕ್ಕೆ ಸುಮಾರು 8 ಲಕ್ಷ ರೂಪಾಯಿಗಳ ಜಾಹೀರಾತು ತಂದದ್ದಕ್ಕೆ ತುಂಬಾ ಸಂತೋಷ. ಕರ್ನಾಟಕ ಸರ್ಕಾರದ ಜಾಹೀರಾತಿಗೆ ಪ್ರಯತ್ನಿಸಿರಿ. ಬಸವಣ್ಣನವರ ವಿಷಯದ ಮೇಲೆ ಬರೆದ ಲೇಖನ ಚೆನ್ನಾಗಿದೆ. ‘ಅಯ್ಯಾ’ ಎಂದರೆ ಸ್ವರ್ಗ, ‘ಎಲವೋ’ ಎಂದರೆ ನರಕ. ಓದಿದಾಗ, ನನಗೆ ನನ್ನ ಶಾಲಾ ದಿನಗಳ ನೆನಪಾಯಿತು. ಆ ಕಾಲದಲ್ಲಿ Self Improvement ಗಳ ವಿಷಯ ಪುಸ್ತಕಗಳಿರಲಿಲ್ಲ. ಬಸವಣ್ಣನವರ ಭೋದನೆ ಸುಲಭದಲ್ಲಿ ಎಲ್ಲರಿಗೂ ತಿಳಿದು ಅರ್ಥವಾಗುವಂತವುದು.

**–■ ಪಿ.ವಿ. ನಾಯಕ್, ನವದೆಹಲಿ**

ಅಭಿಮತ ಪ್ರಧಾನ ಸಂಪಾದಕರಿಗೆ ತಿಳಿಸುವುದೇನೆಂದರೆ, ಸಂಪಾದಕ ಮಂಡಳಿಯ ಸದಸ್ಯೆ ಡಾ. ಸುಮಂಗಲಾದೇವಿ ಅವರು ಬರೆಯುವ ಲೇಖನದಲ್ಲಿ ಅತಿ ವಿಶಿಷ್ಟವಾದ ಒಳ್ಳೆಯ ಮಾಹಿತಿಗಳನ್ನು ಹೊಂದಿರುತ್ತದೆ ಹಾಗೂ ಎಲ್ಲಾ ರೀತಿಯ ಇತಿಹಾಸದ ಪುಟಗಳನ್ನು ನೆನಪಿಸಿಕೊಳ್ಳುವಂತೆ ಮಾಡುತ್ತದೆ, ಆದರೆ ಅವರ ಲೇಖನ ಹಾಗೂ ಕಥೆಗಳಲ್ಲಿ ಅಥವಾ ವರದಿಗಳಲ್ಲಿ ಕೆಲವು ಪದಗಳ ಜೋಡಣೆಯಲ್ಲಿ ಅವರ ಲೇಖನಿ ಕೈ ತಪ್ಪಿದಂತೆ ಕಾಣುತ್ತದೆ, ಅದು ಏನೆಂದರೆ ಮಹಾನ್ ವ್ಯಕ್ತಿಗಳ ಜೀವನ ಚರಿತ್ರೆಯನ್ನು ಲೇಖನ ರೂಪದಲ್ಲಿ ಅಭಿಮತಕ್ಕೆ ಬರೆಯುವಾಗ ಆ ಮಹಾನ್ ಪುರುಷರ ಅಥವಾ ಮಹಾನ್ ವ್ಯಕ್ತಿಗಳನ್ನು ಸರಿಯಾದ ಸಾಹಿತ್ಯಿಕ ಭಾಷೆಯಲ್ಲಿ ಸಂಭೋದನೆ ಅಥವಾ ಉಚಿತರೂಪದಲ್ಲಿ ಓದುಗರ ಮುಂದಿಡುವ ಪ್ರಯತ್ನ ಮಾಡಬೇಕಾಗಿದೆ. ನನ್ನ ಆಶಯ ಮುಂದಿನ ವರದಿಗಳಲ್ಲಿ ಡಾ. ಸುಮಂಗಲಾದೇವಿಯವರು ಈ ವಿಷಯವನ್ನು ಗಮನದಲ್ಲಿಟ್ಟುಕೊಂಡು, ಸಂಘದ ಮುಖಪುಟ ಅಭಿಮತ ಬೆಳೆಸುವಲ್ಲಿ ತಮ್ಮ ಶಕ್ತಿ ಮೀರಿ ಪ್ರಯತ್ನಿಸಲಿ ಎಂದು ಆಶಿಸುತ್ತೇನೆ.

**–■ ಶ್ರೀನಾಥ್ ಎನ್.ಆರ್. ಜಂಟಿ ಕಾರ್ಯದರ್ಶಿ**

ಜೂನ್ ತಿಂಗಳ ಅಭಿಮತ ಬಂದು ತಲುಪಿತು. ಅದರಲ್ಲಿ ಈಗಿನ ಅಭಿಮತ ಮಂಡಳಿ ಈ 12 ತಿಂಗಳಲ್ಲಿ 8 ಲಕ್ಷ ರೂಪಾಯಿಗಳ ಜಾಹೀರಾತು ತಂದಿರುವುದು ಓದಿ ತುಂಬ ಸಂತೋಷವಾಯಿತು. ಹೀಗೆ ಮುಂದೆ ಕೂಡಾ ಅಭಿಮತ ಸ್ವಾವಲಂಬಿಯಾಗಿ ಬೆಳೆಯಲೆಂದು ಆಶಿಸುವೆ.

ದೆಹಲಿಯಲ್ಲಿ 25 ವರ್ಷ ಇದ್ದ ನನಗೆ, ಸರ್. ಎಂ. ವಿಶ್ವೇಶ್ವರಯ್ಯನವರ ಪುತ್ಥಳಿ ದೆಹಲಿಯಲ್ಲಿ ಇದೆ ಎಂದು ತಿಳಿದು ಬಂದಿದ್ದು ಜೂನ್ ತಿಂಗಳ ಅಭಿಮತ ಓದಿದಾಗಲೇ.

ಅಭಿಮತದಿಂದ ದೆಹಲಿಯಲ್ಲಿ ಏನೇನು ಕಾರ್ಯಕ್ರಮಗಳು ನಡೆಯುತ್ತಿವೆ ಎನ್ನುವುದು ತಿಳಿಯುತ್ತಿದೆ. ಹೀಗೆ ಇನ್ನೂ ಉತ್ತಮವಾಗಿ ಬೆಳೆಯಲೆಂದು ಆಶಿಸುವೆ.

**–■ ಎಸ್.ವಿ. ನಿಂಗಪ್ಪ**
**ಉಪಾಧ್ಯಕ್ಷರು, ಗೋವಾ ಕನ್ನಡ ಸಮಾಜ, ಗೋವಾ.**

## ಅಭಿ ಮತ

“ನಿನ್ನ” “ರೂಪ” ಕ್ಕೆ “ಈಗ” “ಅಭಿ” “ಮತ” “ಸಾಕ್ಷಿ”
“ಶಿಸ್ತು” “ಕ್ರಮ” “ಶಬ್ದ” “ಅರ್ಥ” “ಬಣ್ಣ” “ವರ್ಣ” “ಜೊತೆ” ಯೊಡನೆ
“ಇತಿ” “ಕಥೆ”ಯ “ಲೇಖ” “ಚೆನ್ನ” : “ಗದ್ಯ” “ಪದ್ಯ” “ಕಥೆ” “ಗಾದೆ” “ಹಾಸ್ಯ”
“ಗೌಣ” “ರೋಗ” “ಪಥ್ಯ” ದಿಂದ “ಯುಕ್ತ” ವಾದ “ಮುಕ್ತ” “ಹಾಳೆ”ಗಳು
“ಕಣ್ಣು” “ಮನ”ಕ್ಕೆ “ಮುದ”;

“ಹೊಸ” “ಬಣ್ಣ” “ಬಣ್ಣ”ದ “ಬಟ್ಟೆ” “ತೊಟ್ಟು” “ಬೊಟ್ಟು” “ಇಟ್ಟು”
“ನಸು” “ನಗು”ತ “ಹಾಸ್ಯ” “ಪರಿ” “ಹಾಸ್ಯ” ದ “ಹೊಸ” “ಭಾಸ”ದಲ್ಲಿ “ನಿನ್ನ”
“ಇತಿ” “ಹಾಸ”ದ “ಗತ” “ದಿನ”ಗಳ “ನೆನೆ” ಯುವೆ “ನಾನು”.
“ನಿನ್ನ” “ಬಾಳು” “ಯಶ” “ಪಥ”ದಲ್ಲಿ “ದಿಟ್ಟ”ವಾದ “ಹೆಜ್ಜೆ” “ಇಟ್ಟು”
“ನಡೆ”ಯಲಿ ಎಂದು “ನನ್ನ” “ಮನ”ದ “ಆಳ” ವಾದ “ಇಚ್ಛೆ”.
“ಅಜ್ಜಿ” ನಾನು “ಕತ್ತು” “ಎತ್ತಿ” “ನಭ” ನೋಡುತ್ತ “ಶುಭ” “ನುಡಿ”
“ಉಲಿ”ಯುತ್ತಾ “ನಮ್ಮ” “ನಾಡು” “ಚಿನ್ನ” “ನಮ್ಮ” “ಭಾಷೆ” “ಚೆನ್ನ”
ನಮ್ಮ “ರಾಜ”ಧಾನಿಯ “ಡೆಲ್ಲಿ” “ಸಂಘ” ಬಹು “ಚೆನ್ನ” ; “ಇದು” “ನನ್ನ”
“ಅಭಿ” “ಮತ” ಎಂಬ “ನನ್ನ” “ಮುಕ್ತ” “ಕಂಠ”ದ “ಗಾನ” “ಇದು”;
“ಹಾಡು” “ಹಳೆ” ಯದಾದರೇನು “ಭಾವ” “ನವ” ನವೀನ.

**–■ ಡಾ. ಅಹಲ್ಯಾಚಿಂತಾಮಣಿ**



## GO FOR A SAVINGS ACCOUNT
## THAT GIVES YOU JUMBO BENEFITS

Presenting **Star Diamond Savings Account** that lets you do more than just saving. Avail of exciting benefits such as :

• Free SMS / Phone / ATM and internet banking • Personalized Cheque Book • Free Home delivery of demand draft (courier) • Free Statement of account on demand • International Gold credit card • International debit card • Allocation of a Relationship Manager • Free RTGS/NEFT through internet banking • Free Personal air accident insurance • Free SMS alerts for debit/credit transaction • Free demat account and maintenance charges • Free stop payment of cheque • Free inward cheque return charges • Free processing charges on personal / retail loans.

Conditions apply

*Relationships beyond banking*

बैंक ऑफ़ इंडिया
Bank of India

Head Office : Star House, C - 5, 'G' Block, Bandra Kurla Complex, Bandra (East), Mumbai - 400 051.

**Visit us at www.bankofindia.co.in**

SMS “BOI<CITY>” TO 57575 e.g. “BOI MUMBAI” / Call Center 022 40919191.

# ಮೆಹರೋಲಿಯ ಅಹಿ



**ಹೊ**ಸದೆಹಲಿಯಲ್ಲಿ ಇರುವ ಪ್ರಸಿದ್ಧ ಐತಿಹಾಸಿಕ ಸ್ಥಳವಾದ ಕುತುಬ್‌ಮಿನಾರಿನ ಸಮೀಪದಲ್ಲಿ, ಚಿಕ್ಕ ಬಸ್ ನಿಲ್ದಾಣಕ್ಕೆ 'ಅಹಿಂಸಾ ಸ್ಥಳ' ಎಂಬ ಹೆಸರನ್ನು ಇಡಲಾಗಿದೆ. ಅದರ ಸಮೀಪದಲ್ಲಿ ಭಗವಾನ್ ಮಹಾವೀರ ಅಹಿಂಸಾ ಕೇಂದ್ರ, ಅಹಿಂಸಾ ಸ್ಥಳ ಮೆಹರೋಲಿ.
ಹೊಸ ದೆಹಲಿ (ನವದೆಹಲಿ)-30 ಎನ್ನುವ ಹೆಸರಿನ ಫಲಕ ಕಾಣಿಸುತ್ತದೆ. ದ್ವಾರದ ಒಳಗಡೆ ಕಾಲಿಡುತ್ತಿದ್ದಂತೆಯೇ ಪ್ರಶಾಂತ, ವಾತಾವರಣದ ಅನುಭವ ಆಗುತ್ತದೆ. ಭಾರತದ ರಾಜಧಾನಿ ದೆಹಲಿಯಂತಹ ದೊಡ್ಡ ಪ್ರದೇಶದ ಹೊರಭಾಗದಲ್ಲಿ ಬಸ್ಸು, ಜನಸಂಚಾರ ಇಂತಹ ವಾತಾವರಣದ ಸಮೀಪದಲ್ಲಿಯೇ ಸಾಧಾರಣ ಮೂರು ಎಕರೆ ಪ್ರದೇಶದಲ್ಲಿ ಹುಲ್ಲುಗಾವಲು, ಮರಗಿಡಗಳು, ನೀರಿನ ವ್ಯವಸ್ಥೆ, ಚಿಕ್ಕ ಪುಸ್ತಕ ಮಳಿಗೆ, ತಂಪು ಪಾನೀಯ ಹಾಗೂ ಚಹಾ-ಕಾಫಿಯ ವ್ಯವಸ್ಥೆ ಇರುವ ಮಳಿಗೆ, ಶಿಸ್ತಿನ ಪಾಲನೆ ಮಾಡುತ್ತಾ ಇರುವ ಕೆಲವೇ ಜನ ಕಾರ್ಯಕರ್ತರು. ನಂತರ, ಮುಂದೆ ಸಾಗಿದರೆ, ಕಲ್ಲಿನ ಚಿಕ್ಕ ಚಪ್ಪಡಿಗಳಿಂದ ನಿರ್ಮಾಣ ಮಾಡಿದ ಸುಲಭವಾಗಿ ಆಯಾಸವಿಲ್ಲದೆ ಸಾಗಲು ಮಾಡಿದ ಏರು ಮಾರ್ಗ ಎಂದು ಹೇಳಬಹುದು. ಅದರ ಬದಿಯಲ್ಲೇ ಮೆಟ್ಟಿಲುಗಳೂ ಉಂಟು. ಮೊದಲು ಕಾಣ ಸಿಗುವುದು ಒಂದೇ ಅಖಂಡ ಕಲ್ಲಿನ ಕೆತ್ತನೆಯ ಅಪೂರ್ವ ಕಲಾಕೃತಿ. ಅದರಲ್ಲಿ ಒಂದು ಸಿಂಹ ಹಾಗೂ ಆಕಳು ಒಂದು ಕಲ್ಲಿನ ತೊಟ್ಟಿಯಲ್ಲಿಯ ನೀರನ್ನು ಏಕಕಾಲಕ್ಕೆ ಕುಡಿಯುತ್ತಿವೆ. ಸಿಂಹದ ಮರಿ ಆಕಳ ಹಾಲನ್ನು ಕುಡಿಯುತ್ತಿದೆ, ಆಕಳ ಮರಿ ಸಿಂಹದ ಹಾಲನ್ನು ಕುಡಿಯುತ್ತಿದೆ. ಪ್ರಥಮ ಬಾರಿಗೆ ಇಂತಹ ಅಮೋಘ ಚಿತ್ರಣ ನೋಡಿದೆನೆಂದು ಭಾಸವಾಯಿತು. ಬದ್ಧವೈರಿ ಎಂದು ಹೆಸರಿಸುವ ಪ್ರಾಣಿಗಳು ಎಲ್ಲ ಹಿಂಸಾತ್ಮಕ ಭಾವನೆ ಬಿಟ್ಟು ಮೈತ್ರಿ ಜೀವನ ಮಾಡಿ ಮನುಷ್ಯರಿಗೆ ಪಾಠ ಕಲಿಸುವಂತಿದೆ. ಪ್ರಾಣಿಗಳಿಂದ, ಸಸ್ಯ ಜೀವಿಗಳಿಂದ ಪ್ರಕೃತಿಯಿಂದ ಮನುಷ್ಯ ಯಾವ ರೀತಿ ಮನಸ್ಸನ್ನು ಪರಿವರ್ತಿಸಿಕೊಳ್ಳಬೇಕು ಎನ್ನುವುದನ್ನು, ವಿಚಾರಿಸುತ್ತಾ ಮತ್ತೆ ಮೆಟ್ಟಿಲೇರಿದಾಗ ಮೆಟ್ಟಿಲಿನ ಸ್ವಲ್ಪ ಕೆಳಗಿನ ಶಿಲೆಯಲ್ಲಿ ಕೆತ್ತಲಾದ ವಾಕ್ಯಗಳಿವೆ (ಹಿಂದಿಯಲ್ಲಿ) "3 ದ್ರವ್ಯಗಳಿರುತ್ತವೆ. ದಾನ, ಭೋಗ ಹಾಗೂ ನಾಶ" "ದಾನ, ಹಾಗೂ ಭೋಗ ಮಾಡದಿದ್ದರೆ, ನಿಶ್ಚಯವಾಗಿ ವಿನಾಶ ಆಗುತ್ತದೆ" ಎಂದು. ಆ ಮೆಟ್ಟಿಲಿನ ಮೇಲೆ ನಿಂತರೆ, ವಿಶಾಲವಾದ ಚಚ್ಚೌಕಾರದ (ಚೌಕಾಕಾರದ) ಪ್ರದೇಶದಲ್ಲಿ "ಭಗವಾನ್ ಮಹಾವೀರಸ್ವಾಮಿ (24ನೇ ಜೈನ ತೀರ್ಥಂಕರ) ಯ ವಿಶಾಲ ಪ್ರತಿಮೆ ಕಾಣಿಸುತ್ತದೆ. ಆ ಮೂರ್ತಿಯನ್ನು ನೋಡಿ ಮನಸ್ಸಿಗೆ ಬಹಳ ಸಂತೋಷ ಹಾಗೂ ಭಕ್ತಿ ಭಾವ ಬರುತ್ತದೆ. ಪ್ರದಕ್ಷಿಣೆ ಹಾಕಿ ನಮಸ್ಕರಿಸಿ ಕುಳಿತಾಗ, ಆ ಪ್ರತಿಮೆಯ ಬಗ್ಗೆ ಮಹಾವೀರನ ಜೀವನದ ವಿಚಾರಗಳು ಪ್ರಾರಂಭವಾಗುತ್ತವೆ".
ಸ್ವರ್ಗೀಯ ಶ್ರೀ ಪ್ರೇಮಚಂದ ಜೈನ (16/09/1918-07/10/1995) ಇವರು ಮೆಹರೋಲಿಯ ಅಹಿಂಸಾ ಸ್ಥಳ ಸಂಸ್ಥಾಪಕರು. "ಸ್ವಸ್ತಿ ಶ್ರೀ 2596 ರಲ್ಲಿ ವೀರ ನಿರ್ವಾಣಾಂದೆ 2047ರಲ್ಲಿ ವಿಕ್ರಮಾಬ್ದೆ ವೈಶಾಖಮಾಸೆ ಶುಕ್ಲಪಕ್ಷೆ ತ್ರಯೋದಶಯಾತಿಥೌ ಚಂದ್ರವಾಸರೆ ಶ್ರೀ ಮೂಲಸಂಘೆ ದಿಗಂಬರ ಜೈನ ಕುಂದಕುಂದಾನ್ಮಾಥೆ. ಭರತಕ್ಷೇತ್ರೆ ಆರ್ಯಖಂಡೆ ಇಂದ್ರಪ್ರಸ್ಥನಗರೆ ದೆಹಲಿ-ಮೆಹರೋಲಿಸ್ಥಾನ ಜಿನಬಿಂಬ ಪಂಚಕಲ್ಯಾಣಕ ಪ್ರತಿಷ್ಠಾಪೂರ್ವಕಂ ಅಗ್ರವಾಲ ವಂಶಿ ಗರ್ಗ ಗೋತ್ರೆ ಶ್ರೀಮಾನ್ ಲಾಲಾಬಲದೇವಸಿಂಹ ತತ್ಪುತ್ರ ಲಾಲಾ ರಘವೀರಸಿಂಹ ತತ್ಪುತ್ರ ಶ್ರೀ ಪ್ರೇಮಚಂದ, ಕೈಲಾಶಚಂದ, ಶಾಂತಿ ಸ್ವರೂಪ, ಪೌತ್ರ ಕೌಶಲಕುಮಾರ, ಅಶೋಕಕುಮಾರ-ನಿರ್ಮಲ ಕುಮಾರ, ವಿನೋದಕುಮಾರ, ರಾಜಕುಮಾರ, ರವಿಕುಮಾರ, ಪ್ರದೀಪಕುಮಾರ-7 ದರಿಯಾಗಂಜ ನಯಿ ದೆಹಲಿ ನಿವಾಸಿ ದ್ವಾರಾ ಪ್ರತಿಷ್ಠಾಪಿತಂ ಶ್ರೀ 2007 ತೀರ್ಥಂಕರ ಮಹಾವೀರ ಜಿನೇಂದ್ರಸ್ವಬಿಂಬಿಮಿದಂ ಸರ್ವಲೋಕ ಕಲ್ಯಾಣಾಥಭ್ಯದೇತಿ। ಪ್ರತಿಷ್ಠಾಚಾರ್ಯ ಪಂಡಿತ-ನಾಥುಲಾಲ ಶಾಸ್ತ್ರೀ!

**ಶ್ರೀ 1008 ತೀರ್ಥಂಕರ ಮಹಾವೀರ ಜಿನೇಂದ್ರಾಯ ನಮಃ (ಕನ್ನಡದಲ್ಲಿ)**
**ಶ್ರೀ ಮಹಾವೀರ ಜಿನೇಂದ್ರಾಯ ನಮಃ**
**ಶ್ರೀ ಮಹಾವೀರ ಭಗವಾನ್ ಅಹಿಂಸಾ ಸ್ಥಳ**

ಈ ರೀತಿ ಕೆಂಪು ಗ್ರ್ಯಾನೇಟ್ ಶಿಲೆಯ ಮೇಲೆ ಕೆತ್ತಿದ್ದಾರೆ. ಒಂದು ವಾಕ್ಯವನ್ನು ಕನ್ನಡದಲ್ಲಿ (ಕೆತ್ತಿದ್ದಾರೆ) ಬರೆದಿದ್ದಾರೆ. ಮಹಾವೀರನ ಮೂರ್ತಿಯ ಎರಡೂ ಬದಿಗೆ ಒಂದೊಂದು ಸಿಂಹದ ಮೂರ್ತಿ ಇವೆ. (ಮುಂಭಾಗದಲ್ಲಿ) ಮಹಾವೀರನ ಮೂರ್ತಿಯ ಶಿಲ್ಪದ ಎರಡೂ ಬದಿಗೆ ಕೃಷ್ಣವರ್ಣದ ದ್ವಾರಪಾಲಕರ ಮೂರ್ತಿ ಇವೆ. ಆ ಸುಂದರ ಕಪ್ಪು ಶಿಲೆಯ ಮೇಲೆ ಶಿಲ್ಪಿ ಶಾಮರಾಯ ಆಚಾರ್ಯ, ಕಾರ್ಕಳ-574104 ಎಂಬ ಕಲ್ಲಿನಲ್ಲಿಯ ಕೆತ್ತನೆಯ ಬರವಣಿಗೆ ಇದೆ.
ಈ ದಿವ್ಯ, ವಿಶಾಲ ಪ್ರತಿಮೆ ದಕ್ಷಿಣ ಭಾರತದ, ಕರ್ನಾಟಕ ರಾಜ್ಯದಲಿರುವ ಕಾರ್ಕಳ ನಗರದ ಪ್ರಸಿದ್ಧ ಶಿಲ್ಪಿ ಶ್ರೀ ಶಾಮರಾಯ ಆಚಾರ್ಯರಿಂದ ಅಖಂಡ ಕೆಂಪು ಚಂದ್ರಕಾಂತ ಶಿಲೆ (ಗ್ರ್ಯಾನೇಟ್) ಶಿಲೆಯಿಂದ 5 ವರ್ಷಗಳ ಅವಿರತ ಪರಿಶ್ರಮದಿಂದ ಕುಶಲ ಶಿಲ್ಪಿಗಳಿಂದ ಪ್ರಖರ ದೈವೀಯ ಚಮತ್ಕಾರ ಸ್ವರೂಪದಿಂದ ಸಿದ್ಧವಾಯಿತು. ಈ ವಿಶಾಲ ಪ್ರತಿಮೆಯ ಎತ್ತರ 13.6 ಅಡಿ, ಅಗಲ 11.10 ಅಡಿ, ತೂಕ 30 ಟನ್ ಇದೆ. ಕಮಲದ ಎತ್ತರ 2.8 ಅಡಿ, ತೂಕ 17 ಟನ್ ಇದೆ.
ಭಗವಾನ್ ಮಹಾವೀರನ ಈ ಮನೋಹರ ದಿವ್ಯ ಮೂರ್ತಿಯು ಅರೆಕಣ್ಣು ಮುಚ್ಚಿ ಪದ್ಮಾಸನದಲ್ಲಿ ಕುಳಿತು ಧ್ಯಾನದಲ್ಲಿ ತಲ್ಲೀನವಾಗಿರುವುದಾಗಿದೆ. ಕಮಲದ ಪುಷ್ಪದ ಮೇಲೆ ವಿಶಾಲ ಕಲ್ಲು ಚಪ್ಪಡಿಯ ಮೇಲೆ ಕುಳಿತಿದ್ದು ಕಲ್ಲು ಚಪ್ಪಡಿಯ ಹೊರಗಡೆಯಲ್ಲಿ ಚಿಕ್ಕ ಸಿಂಹದ ಮೂರ್ತಿಯ ಕೆತ್ತನೆಯೂ ಇದೆ. ಅದೇ ರೀತಿ ಕೆಳಗಡೆ ಕೆಂಪು ಶಿಲೆಯ ಆಸನದ ರೀತಿ ಶಿಲೆ ಕೆತ್ತಲ್ಪಟ್ಟಿದ್ದು ಅದರ ಮಧ್ಯದಲ್ಲಿಯೂ ಚಿಕ್ಕ ಸಿಂಹದ ಮೂರ್ತಿ ಕೆತ್ತನೆ ಮಾಡಿದ್ದಾರೆ. ಸಿಂಹ ಮಹಾವೀರನ ಲಾಂಛನದ ಚಿಹ್ನೆ ಎಂದು ಹೇಳಿದ್ದಾರೆ. ಕೆಳಗಡೆ ಮತ್ತೆ ಚಿಕ್ಕ ಕಲ್ಲಿನ ಪ್ರಾಂಗಣ ಮಾಡಿ ಮಹಾನ್ ಸನ್ಯಾಸಿಯ ಸ್ಪರ್ಶ ಯಾರೂ ಮಾಡದಿರುವಂತೆ ಸುರಕ್ಷಿತ ಕ್ರಮಕೈಗೊಂಡಿದ್ದಾರೆ. ಪ್ರತಿದಿನ ಬೆಳಗ್ಗೆ ಗುರುಗಳಿಂದ ಪೂಜೆಯ ಕಾರ್ಯಕ್ರಮ ನೆರವೇರುತ್ತದೆ. ಅವರಿಗೆ ಮಾತ್ರ ಸ್ಪರ್ಶ ಮಾಡಲು ಅವಕಾಶ ಕಲ್ಪಿಸಲಾಗಿದೆ.
ಭಾರತ ದೇಶದಲ್ಲಿ ಅಖಂಡ ಗ್ರ್ಯಾನೇಟ್ ಶಿಲೆಯಲ್ಲಿ ಇಷ್ಟು ದೊಡ್ಡ ಭಗವಾನ್ ಮಹಾವೀರನ ಮೂರ್ತಿ ರಚನೆಯಾಗಿ ಸ್ಥಾಪಿತವಾದದ್ದು ಪ್ರಥಮ ಹಾಗೂ ಇದೊಂದೇ ಎಂದು ಪ್ರಸಿದ್ಧಿ ಹೊಂದಿದೆ. ಈ ನಯನಮನೋಹರ ಮೂರ್ತಿಯ ದರ್ಶನದಿಂದ ಶಾಂತಿ, ಅಹಿಂಸೆಯ ಭಾವನೆ ಬರುತ್ತದೆ. ಈ ಮೂರ್ತಿ ಉತ್ತರ ಭಾರತದವರಿಗೆ ದಕ್ಷಿಣ ಭಾರತದ, ಕರ್ನಾಟಕದ, ಕಾರ್ಕಳದವರ ಅದ್ವಿತೀಯ ಕೊಡುಗೆ ಆಗಿದೆ ಎಂದು ಹೆಮ್ಮೆಯಿಂದ ಬೀಗುವಂತಹ ಸಂಗತಿಯಾಗಿದೆ. ಮನುಷ್ಯ, ಮನುಷ್ಯರಲ್ಲಿ ಪರಸ್ಪರ ಪ್ರೇಮ, ಅಹಿಂಸೆಯ ಸಾಮ್ರಾಜ್ಯ ಆಗಬೇಕು. ಆತಂಕವಾದ ನಿಲ್ಲಬೇಕು, ವಿಶ್ವಕಲ್ಯಾಣ ಆಗಬೇಕು. ರಾಷ್ಟ್ರದ ಉತ್ಥಾನವಾಗಬೇಕೆಂದು ಬಯಸಿ ಸಾಧಾರಣ 20 ವರ್ಷಗಳ ಹಿಂದೆ ಸ್ಥಾಪನೆ ಮಾಡಲಾಗಿದೆ. ಕರ್ನಾಟಕದ ಧರ್ಮಸ್ಥಳದ ಧರ್ಮಾಧಿಕಾರಿಗಳಾದ ಶ್ರೀ ಡಿ.ವೀರೇಂದ್ರ ಹೆಗ್ಗಡೆಯವರ ಸಹಾಯದಿಂದ ಕಾರ್ಕಳದಿಂದ ದಿಲ್ಲಿಯವರೆಗೆ ಮೂರ್ತಿಯನ್ನು ತರಲಾಯಿತು.

ಮುಂಬಯಿಯ ಮಂಗತ್‌ರಾಮ್ ಸಹೋದರರು 64 ಗಾಲಿಗಳ ವಿಶೇಷ ಟ್ರಾಲಿಯನ್ನು ನಿರ್ಮಿಸಿ 250ಕ್ಕೂ ಹೆಚ್ಚು ಅಶ್ವಶಕ್ತಿಯ ಮೋಟಾರು ಯಂತ್ರಗಳನ್ನು ಟ್ರಾಲಿಗೆ ಜೋಡಿಸಿ 200 ಟನ್ ತೂಕ, 52 ಅಡಿ ಉದ್ದ, 14 ಅಡಿ ಅಗಲದ ಬಾಹುಬಲಿ ಮೂರ್ತಿಯನ್ನು ಕಾರ್ಕಳದಿಂದ ಧರ್ಮಸ್ಥಳಕ್ಕೆ ಸ್ಥಳಾಂತರಿಸಿ ಸ್ಥಾಪಿಸಿದ್ದರೋ, ಅದೇ ರೀತಿ ಸಾಧಾರಣ 3 ತಿಂಗಳ ಅವಧಿಯಲ್ಲಿ 20 ಗಾಲಿಗಳ ವಾಹನದಲ್ಲಿ ಈ ಮೂರ್ತಿಯನ್ನು ಕಾರ್ಕಳದಿಂದ ದೆಹಲಿಗೆ ತರಲಾಯಿತು. ಕಾರ್ಕಳದ ಶಿಲ್ಪಿಗಳು ಶಿಲ್ಪಕೆತ್ತನೆಯಲ್ಲಿ, ಮೂರ್ತಿ ಕೆತ್ತನೆಯಲ್ಲಿ ವಿಶ್ವಪ್ರಸಿದ್ಧರು. ಚಾವುಂಡರಾಯನ ಕಾಲದಲ್ಲಿ ಶ್ರವಣಬೆಳಗೊಳದಲ್ಲಿ ಏಕ ಶಿಲೆಯಲ್ಲಿ ಕೆತ್ತಿದ 57 ಅಡಿಯ ಗೊಮ್ಮಟೇಶ್ವರನ ವಿಗ್ರಹ ಅತೀ ಮುಗ್ಧಮುಖವನ್ನು ಹೊಂದಿದೆ. ವೇಣೂರು, ಮೂಡಬಿದಿರೆ, ಕಾರ್ಕಳ ಹೀಗೆ ಅನೇಕ ಜಿನ ಬಸದಿಗಳು ಮತ್ತು ಆ ಬಸದಿಯ ಮೇಲೆ ವಿಶಿಷ್ಟ ಶಿಲ್ಪವಿನ್ಯಾಸ, ವಿವಿಧತೆ ಅತ್ಯಂತ ನಯವಾಗಿ ಹೊಳಪುಳ್ಳ ಶಿಲ್ಪಗಳು ನೋಡಲು ಸಿಗುತ್ತವೆ. ಮೂಡಬಿದಿರೆಯಲ್ಲಿ ನಾಲ್ಕೂ ಬದಿಗೆ ನಿಂತಿರುವ ಜೈನ ತೀರ್ಥಂಕರನ ಕಪ್ಪು ಶಿಲೆಯ ಮೂರ್ತಿ ರಚನೆ. ಒಂದೇ ಕಲ್ಲಿನಲ್ಲಿ ನೋಡಿ ಅದ್ಭುತ ಕಲೆಯನ್ನು ಗುರುತಿಸಬಹುದು. ಇದು ಕರ್ನಾಟಕದವರ ಹೆಮ್ಮೆಯ ವಿಷಯ. "ಕಲೆಗಾರ ಶಿವನ ಅವತಾರ" ಶಿಲ್ಪಿಗಳ ಅಮೋಘ ಕೃತಿಯನ್ನು ಎಷ್ಟು ವರ್ಣಿಸಿದರೂ ಕಡಿಮೆಯೇ. ಪಾಷಾಣಕ್ಕೆ ಮೂರ್ತಿರೂಪ ಕೊಟ್ಟು ಅದರಲ್ಲಿ ದೈವತ್ವದ ಸತ್ವ ತುಂಬಿ ಆ ಮೂರ್ತಿಯ ದರ್ಶನ ಮಾತ್ರದಿಂದಲೇ ನಾವೆಲ್ಲರೂ ಧನ್ಯರಾದೆವು ಎನ್ನುವ ಭಾವನೆ ಬರುವಂತೆ ಮಾಡುವ ಕಲೆ ಸಾಮಾನ್ಯ ಜನರಿಗೆ ಲಭಿಸುವಂತಹದಲ್ಲ. ಇಂತಹ ವಿಶಿಷ್ಟ ಶಿಲ್ಪಿಗಳನ್ನು ಹೊಂದಿದ ಕನ್ನಡಾಂಬೆ ಧನ್ಯಳು. ಶಿಲ್ಪಿಗಳಿಗೆ ನಮೋನ್ನಮಃ ಹೇಳುತ್ತಾ, ಇತಿಹಾಸ ನೋಡಿದಾಗ ಶಿಲ್ಪಿಗಳ ಶಿಲೆಯ ಮೊದಲ ಹಂತದಲ್ಲಿ ಆ ಕಲ್ಲಿನ ತೂಕದಷ್ಟು ಸುವರ್ಣ ನಾಣ್ಯ. ನಂತರದ ಸೂಕ್ಷ್ಮ ಕುಸುರಿನ ಕೆಲಸ ಹಾಗು ನಯವಾದ ಪಾಲಿಶಿಂಗ್ (ಅನೇಕ ಗಿಡಮೂಲಿಕೆಗಳನ್ನು ಕಲ್ಕ ಮಾಡಿ ಉಪಯೋಗಿಸುತ್ತಿದ್ದರಂತೆ. ಮೇಣದ ಹಾಗೆ ನಯವಾಗಿ ಹೊಳಪುಳ್ಳದ್ದಾಗಿ ಮಾಡಲು) ಅದಕ್ಕೆ ವಜ್ರ ವೈಡೂರ್ಯಗಳನ್ನೇ ಕೊಡುತ್ತಿದ್ದರಂತೆ. ಅಂದರೆ, ಕಲೆಗಾರನಿಗೆ ಪ್ರೋತ್ಸಾಹಿಸಿ ಆ ಕಲೆ ಅವನ ಕುಟುಂಬ ಹಾಗೂ ಇತರರಿಗೂ ಕಲಿಸಿ, ಬೆಳೆಸುವ ಮನಸ್ಸು ಸ್ಥಿರವಾಗಲಿ ಎನ್ನುವ ಭಾವನೆಯಿಂದ. ವಸ್ತ್ರಗಳನ್ನು ರೇಷ್ಮೆಯಲ್ಲಿ ಚಿನ್ನದ ಎಳೆ ಉಪಯೋಗಿಸಿ, ನೇಯ್ದ, ಪೀತಾಂಬರದಂತೆ ಸಿದ್ಧ ಮಾಡಿದ್ದನ್ನು ಕೊಟ್ಟು ಪ್ರೋತ್ಸಾಹಿಸುತ್ತಿದ್ದರಂತೆ. ಆಗ ರಾಜರ ಆಡಳಿತ ವೈಭವದಲ್ಲಿ ರಾಜಾಶ್ರಯ, ಸತ್ಕಾರ, ಆರ್ಥಿಕ ವಿನಿಯೋಗ ಆಗುವಷ್ಟು ಈಗ ಸಾಧ್ಯವಾಗದಿದ್ದರೂ, ಧರ್ಮಸ್ಥಳದ ಮಂಜುನಾಥೇಶ್ವರ ದೇವಸ್ಥಾನ ಹಾಗೂ ಆಡಳಿತದ ಧರ್ಮಾಧಿಕಾರಿಗಳಾದ ಡಾ. ವಿರೇಂದ್ರ ಹೆಗ್ಗಡೆಯವರು ಹಾಗೂ ಅನೇಕ ಶ್ರೀಮಂತ ವಿದೇಶಿಯರು, ಭಾರತದಲ್ಲಿ ಸ್ವತಃ ಶ್ರೀಮಂತ ಅಥವಾ ಟ್ರಸ್ಟ್‌ನಿಂದ ಆರ್ಥಿಕವಾಗಿ ವ್ಯಯಮಾಡಿ ಕಲೆಯನ್ನು ಉಳಿಸಿ, ಬೆಳೆಸುವಂತೆ ಮಾಡುತ್ತಿರುವುದು ಶ್ಲಾಘನೀಯ ಸಂಗತಿ. ಬೆಲೆ ಕಟ್ಟಲಾಗದ ಅಮೋಘ ಶಿಲ್ಪಿಗಳು ಕರ್ನಾಟಕದಲ್ಲಿ ಹೆಚ್ಚಿರುವುದು ಅತೀ ಸಂತೋಷದ, ಹೆಮ್ಮೆಯ ಸಂಗತಿ. ಕರ್ನಾಟಕದ ಶಿಲ್ಪಕಲೆ ದೇಶದಲ್ಲೆಲ್ಲ ಹರಡಿದೆ. ಇಲ್ಲಿಯ ಕೆಲವು ಮೂರ್ತಿಗಳು ವಿದೇಶಗಳಿಗೆ ಹೋಗಿರುವುದರಿಂದ ವಿಶ್ವದಲ್ಲೆಲ್ಲಾ ಪಸರಿಸಿವೆ. ಇನ್ನೂ ಬೇಡಿಕೆ ಬಹಳವಾಗಿಯೂ ಇದೆ. ಕಾರ್ಕಳದಲ್ಲಿ ವಿಶಿಷ್ಟ ಶಿಲೆ ಸಿಗುವುದು ಸೃಷ್ಟಿಯ ದೇಣಿಗೆ ಎಂದೇ ಹೇಳಬಹುದು. ಹೀಗಾಗಿ ಸೃಷ್ಟಿಗೆಕೂಡಾ ಕೃತಜ್ಞರಾಗಿರಬೇಕು. ಉದಾ : ರಾಮಸಮುದ್ರದಡಿಯ ಶಿಲೆ ಹುಡುಕುವುದು, ಬೇರೆ ಪ್ರದೇಶದಲ್ಲಿಯ ಶಿಲೆಯ ಪರಿಶೋಧನೆ, ಆಯ್ಕೆ, ರೂಪು ಕೊಡುವ ವಿಚಾರ ಇವೆಲ್ಲ ಶಿಲ್ಪಿಗೇ ತಿಳಿಯುವುದು. "ತಲೆ ಬಾಗಿ ಕೈ ಮುಗಿದು ಒಳಗೆ ಬಾ ಯಾತ್ರಿಕನೆ" "ಶಿಲೆಯಲ್ಲವಿ ಗುಡಿಯು ಕಲೆಯ ಬಲೆಯು", "ದೇವನೊಲಿದರೆ ಕೊರಡು ಕೊನರುವುದಯ್ಯಾ" ಎಂದು ಕವಿ ವರ್ಣಿಸುವಂತೆ ಮಾಡುವದು ಶಿಲ್ಪಿಯ ಜ್ಞಾನ ಹಾಗೂ ಪರಿಶ್ರಮ.

ಇನ್ನು ಮಹಾವೀರನ ಬಗ್ಗೆ ವಿಚಾರಿಸಿದಾಗ, ಮಹಾವೀರನು ಜೈನಧರ್ಮದ ಪ್ರಕಾರ 24ನೇ ದಿಗಂಬರ ತೀರ್ಥಂಕರ ಹಾಗೂ ಕೊನೆಯ ತೀರ್ಥಂಕರ ಎಂದು ಹೇಳುವರು. ಮೈ ಬಣ್ಣ–ಸುವರ್ಣ ವರ್ಣ, ಲಾಂಛನ–ಸಿಂಹ, ಜನ್ಮಸ್ಥಳ ಕುಂಡ ಗ್ರಾಮ, ಕುಂಡಪುರ, ನಿರ್ವಾಣ ಸ್ಥಳ – ಪಾವಾಪುರಿ. ತಂದೆಯ ಹೆಸರು–ಸಿದ್ಧಾರ್ಥ, ತಾಯಿಯ ಹೆಸರು–ತ್ರಿಶಲಾದೇವಿ (ಪ್ರಿಯಕಾರಿಣಿ)

**ಜನ್ಮ ಹಾಗು ಬಾಲ್ಯ**

ಬಿಹಾರದ ವೈಶಾಲಿ–ಕುಂಡಪುರದಲ್ಲಿ ಲಿಚ್ಛವಿಯುರಲ್ಲಿ ಒಂದು ಪಂಗಡವಾಗಿದ್ದ ಜಾತೃಗಳಿಗೆ ಸೇರಿದ–ಈಗ ಭೂಮಿಹಾರರ (ಭೂಯಾರ) ಜಥರಿಮಾ ಜಾತಿಯವರು ಮೊದಲು ಜ್ಞಾತೃಗಳಾಗಿರಬೇಕೆಂದು ರಾಹುಲ ಸಾಂಕೃತ್ಯಾಯನರು ತಮ್ಮ ಪುರಾತತ್ವ ನಿಂಬಂಧಾವಲಿಯಲ್ಲಿ ಹೇಳಿರುವಂತೆ, ಪಾರ್ಶ್ವನಾಥನ ಶ್ರವಣ ಪರಂಪರೆಯ ಅನುಯಾಯಿಗಳಾಗಿದ್ದರು. ಇವರ ಹೊಟ್ಟೆಯಿಂದ ಚೈತ್ರ ಶುಕ್ಲ ತ್ರಯೋದಶಿಯ ದಿನ ಮಹಾವೀರನು ಜನಿಸಿದನು. ಇವನು ತಾಯಿಯ ಗರ್ಭದಲ್ಲಿ ಅವತರಿಸಿದಂದಿನಿಂದ ಅವರ ಮನೆತನದ ಸಿರಿ–ಸಂಪತ್ತು ವರ್ಧಿಸುತ್ತ ಹೋದುದರಿಂದ ತಂದೆ–ತಾಯಿಗಳು ಇವನಿಗೆ ವರ್ಧಮಾನನೆಂದು ಹೆಸರಿಟ್ಟರು. ಇವನು ಸಾಹಸ, ಧೈರ್ಯಗಳನ್ನು ಬಾಲ್ಯದಲ್ಲಿಯೇ ಪ್ರದರ್ಶಿಸಿದಾಗ ಜನರು ಇವನಿಗೆ "ಮಹಾವೀರ"ನೆಂದು ಕರೆಯತೊಡಗಿದರು. ಮಹಾವೀರನು ಚಿಕ್ಕ ವಯಸ್ಸಿನಲ್ಲಿಯೇ ವ್ಯಾಕರಣ ಸಾಹಿತ್ಯ ಮೊದಲಾದ ವಿಷಯಗಳಲ್ಲಿ ಜ್ಞಾನಿಯೆನಿಸಿದನು. ಮಹಾವೀರನ ಬುದ್ಧಿವಂತಿಕೆಯ ಪ್ರಭಾವಕ್ಕೆ ಒಳಗಾಗಿ ಸುಜಯ ಮತ್ತು ವಿಜಯ ಎಂಬ ಇಬ್ಬರು ಮುನಿಗಳು. 'ಸನ್ಮತಿ' ಎಂಬ ಸಾರ್ಥಕ ಹೆಸರನ್ನು ಇಟ್ಟಿದ್ದರು. ಮಹಾವೀರನು ರಾಜಮನೆತನದಲ್ಲಿ ಬೆಳೆದವನಾದರೂ ಸುಖದಲ್ಲಿ ಮಗ್ನನಾಗ'ಲಿಲ್ಲ. ವಯಸ್ಸಿಗೆ ಬಂದಾಗ ಮದುವೆ ಆಗಲು ಒಪ್ಪಲಿಲ್ಲ. ನಿಜವಾದ ಸುಖ–ಶಾಂತಿಗಳು ವೈಭವದ ಭೋಗದಲ್ಲಿ ಇಲ್ಲವೆಂದು ಅರಿತು ಮೂವತ್ತು ವರ್ಷಗಳನ್ನು ಕಳೆದನು. ಮೂವತ್ತನೆಯ ವಯಸ್ಸಿನಲ್ಲಿ ಜಿನದೀಕ್ಷೆಯನ್ನು ಸ್ವೀಕರಿಸಿದನು. ಮೈಮೇಲಿನ ಕೋಮಲ ವಸ್ತ್ರಗಳನ್ನು ತ್ಯಾಗ ಮಾಡಿದನು. ಆಭರಣಗಳನ್ನು, ಸ್ವಾದಿಷ್ಟ ಭೋಜನಗಳನ್ನು ತ್ಯಜಿಸಿದನು. ತಾಯಿ, ತಂದೆ, ಬಂಧು ಮಿತ್ರರನ್ನು ಅಗಲಿದನು. ಕ್ಷತ್ರಿಯ ಕುಂಡ ಗ್ರಾಮದ ಹೊರಗೆ ಇದ್ದ 'ಜ್ಞಾತೃಷಂಡ' ಎಂಬ ಉದ್ಯಾನದಲ್ಲಿ ಹೋಗಿ, ಐದು ಮುಷ್ಟಿಯಿಂದ ತನ್ನ ಕೂದಲುಗಳನ್ನು ಕಿತ್ತು (ಲೋಚ)ಗೊಂಡನು, ಶ್ರವಣನಾದನು. ಭಗವಾನರ ಜೀವನದಲ್ಲಿ ಎರಡು ಭಾಗಗಳಿವೆ ಒಂದು ಸಾಧನಾವಸ್ಥೆ, ಇನ್ನೊಂದು ಸಿದ್ಧಾವಸ್ಥೆ.

**ದೀಕ್ಷೆ ಮತ್ತು ತಪಸ್ಸು**

ಮಹಾವೀರನು ದೀಕ್ಷೆಯನ್ನು ತೆಗೆದುಕೊಂಡು ಗಾಳಿ, ಮಳೆ, ಚಳಿ, ಅರಣ್ಯ, ಕಲ್ಲು, ಧೂಳು ಲೆಕ್ಕಿಸದೆ ದಿಗಂಬರನಾಗಿ ಬದುಕಲು ಅವಶ್ಯವಿರುವಷ್ಟು ಆಹಾರ ಮಾತ್ರ ತೆಗೆದುಕೊಂಡು ಸಂಯಮ ಧರ್ಮದ ಪಾಲನೆ ಮಾಡುತ್ತಾ ದೇಹದ ಮಮಕಾರವನ್ನು ತೊರೆದು ಕಠೋರ ಸಾಧನೆ ಮಾಡುತ್ತಾ ತಪಸ್ವೀ ಜೀವನದಲ್ಲಿಯೂ ಬಿಹಾರದ ರಾಜಗೃಹ (ರಾಜಗಿರಿ) ಚಂಪಾ (ಭಾಗಲಪುರ) ಹೀಗೆ ಸಂಚರಿಸುತ್ತಾ ಹೋದನು. ಕೆಲವು ಜನರು ಮಾತ್ರ ಮಹಾವೀರನ ಸಾಧನೆಗೆ ಪ್ರಚೋದನೆ ಕೊಡುವ ಸಾಧನಭೂಮಿಗಳಾಗಿದ್ದವು. ಕೆಲವು ಕಡೆ ಜನರು ಸಿಟ್ಟಿನ ಸ್ವಭಾವದವರಾಗಿದ್ದರು, ಅವರು ಮಹಾವೀರನ ಮೇಲೆ ನಾಯಿಯನ್ನು 'ಛೂ! ಬಿಡುತ್ತಿದ್ದರು, ಕೆಲವೊಮ್ಮೆ ಮಹಾವೀರನು ಹಳ್ಳಿಯಲ್ಲಿ ಹೋದಾಗ, ಹಳ್ಳಿಯ ಜನರು ಒಟ್ಟಾಗಿ ಹೊರಗೆ ಹಾಕಿ ಬಿಡುತ್ತಿದ್ದರು; ಕಟ್ಟಿಗೆ–ಕುಡುಗೋಲುಗಳನ್ನು ತೆಗೆದುಕೊಂಡು ಬೆನ್ನಟ್ಟುತ್ತಿದ್ದರು. ಮಾಂಸ–ಧೂಳುಗಳನ್ನು ಮೈಮೇಲೆ ಒಗೆಯುತ್ತಿದ್ದರು. ಅನೇಕ ಕಡೆಗಳಲ್ಲಿ ಮಹಾವೀರನನ್ನು ಕಳ್ಳನೆಂದು, ಗುಪ್ತಚರನೆಂದು ಬಂಧಿಸಿ ಹೊಡೆಯುತ್ತಿದ್ದರು. ಒಮ್ಮೆ ಮಹಾವೀರನು ತಪಸ್ವಿಗಳ ಆಶ್ರಮದಲ್ಲಿ ಒಂದು ಹುಲ್ಲಿನ ಗುಡಿಸಲಿನಲ್ಲಿ ವಾಸವಾಗಿದ್ದನು. ದನಕರುಗಳು ಬಂದು ಹುಲ್ಲು ತಿನ್ನುವುದರ ಪರಿವೆ ಇಲ್ಲದೆ ಧ್ಯಾನ ಮಗ್ನನಾಗಿರುತ್ತಿದ್ದನು. ಆಶ್ರಮದ ಕುಲಪತಿಗಳು ಮಹಾವೀರನಿಗೆ ಹೀಯಾಳಿಸಿ ಬುದ್ಧಿ ಹೇಳಿದರು. ಆಗಿನಿಂದಲೇ ಮಹಾವೀರನು ಅನ್ಯರಿಗೆ ಉಪದ್ರವವಾಗದ ಸ್ಥಾನದಲ್ಲಿ ಇರುವುದೆಂದೂ ಮೌನ ಹಾಗೂ ಕಾಯೋತ್ಸರ್ಗ (ನಿಂತು ಧ್ಯಾನ ಮಾಡುವುದು) ಪೂರ್ವಕ ಧ್ಯಾನ ಮಾಡತಕ್ಕದೆಂದೂ ನಿಯಮ ಮಾಡಿದನು. ಒಮ್ಮೆ ಎತ್ತುಗಳನ್ನು ಮೇಯಲು ಬಿಟ್ಟ ವ್ಯಕ್ತಿ, ಬೇರೆ ಪ್ರದೇಶಕ್ಕೆ ಹೋಗಿ ನಂತರ ಕೆಲವು ವೇಳೆಯಾದ ನಂತರ ಬಂದು ನೋಡಿದಾಗ ಎತ್ತುಗಳಿರಲಿಲ್ಲ. ಅಲ್ಲೇ ನಿಂತು ಧ್ಯಾನ ಮಾಡುತ್ತಿದ್ದ ಮಹಾವೀರನಿಗೆ

ತನ್ನ ಎತ್ತುಗಳ ಬಗ್ಗೆ ಕೇಳಿದಾಗ ಮೌನವಾಗಿದ್ದ. ಧ್ಯಾನ ಮಾಡುತ್ತಿದ್ದುದರಿಂದ ಉತ್ತರ ಕೊಡಲಿಲ್ಲ. ಹೀಗಾಗಿ ದನಗಾಹಿ ಕೆರಳಿ ಮಹಾವೀರನ ಕಿವಿಗೆ ಕಟ್ಟಿಗೆಯಿಂದ ಹೊಡೆದನು. ಆ ನೋವಿನಲ್ಲಿ ಮಹಾವೀರನು ಅನೇಕ ದಿನಗಳವರೆಗೆ ಕೊರಗುತ್ತ ಇದ್ದನು. ಬೇರೆಯವರು ಸೇವೆ ಮಾಡಲು ಸಿದ್ಧರಾದರೂ ಆ ಸೇವೆಯನ್ನು ಸ್ವೀಕರಿಸಲಿಲ್ಲ. ಈ ರೀತಿ 12 ವರ್ಷಗಳವರೆಗೆ ಘೋರ ಸಾಧನೆ ಮಾಡಿದ ನಂತರ, ಒಂದು ದಿನ ಮಹಾವೀರನು ಜಂಬಿಯಾ ಗ್ರಾಮದ ಹೊರಗೆ ಋಜುವಾಲಿಕಾ ನದಿಯ ತೀರದಲ್ಲಿ ಸಾಲವೃಕ್ಷದ ನೆರಳಲ್ಲಿ ಧ್ಯಾನಮಗ್ನನಾಗಿ ಕುಳಿತಾಗ, "ಕೇವಲ ಜ್ಞಾನ" ಪ್ರಾಪ್ತಿಯಾಯಿತು. ಅಂದು ವೈಶಾಖ ಶುಕ್ಲ ದಶಮಿಯ ದಿನವಿದ್ದಿತು. ಅವನಿಗೆ ಅಂದು ವಿಶ್ವಕಲ್ಯಾಣದ ಮಾರ್ಗವು ಸ್ಪಷ್ಟವಾಗಿ ಕಾಣತೊಡಗಿತು.

**ಉಪದೇಶ ಮತ್ತು ವಿಹಾರ**

ಮಹಾವೀರನ ಲೋಕೋತ್ತರ ಉಪದೇಶದ ಚರ್ಚೆಯು ಎಲ್ಲೆಡೆಗೂ ಆಗಹತ್ತಿತು. ಬಹು ದೂರ ಹೊರಟ ಜನರು ಆತನ ಉಪದೇಶ ಕೇಳಲಿಕ್ಕೆ ಬರಹತ್ತಿದರು. ಮಹಾವೀರನು ಅಹಿಂಸಾ, ಸಂಯಮ, ತಪಗಳಿಗೆ ಉತ್ಕೃಷ್ಟ ಧರ್ಮವೆಂದು ಹೇಳಿದ್ದಾನೆ. ಅಹಿಂಸೆಯ ಪಾಲನೆಗಾಗಿ ಸಂಯಮ-ತಪಗಳ ಅವಶ್ಯಕತೆಯಿದೆ. ಮಾನವನು, ರಾಗ, ದ್ವೇಷ, ಕಾಮ, ಕ್ರೋಧ, ಮಾಯೆ, ಲೋಭ, ಅಹಂಕಾರಗಳಿಗೆ ಒಳಗಾಗಿ ತನ್ನ ಧ್ಯೇಯದಿಂದ ಚ್ಯುತನಾಗುತ್ತಾನೆ. ಸಂಯಮಿಯಾಗಿದ್ದರೆ, ಆತ್ಮಕಲ್ಯಾಣ, ಲೋಕಕಲ್ಯಾಣ ಮಾಡಲು ಸಾಧ್ಯ. ತಪ, ತ್ಯಾಗಭಾವನೆ, ದೇಹದಮನ, ಕಷ್ಟ ಸಹಿಷ್ಣುತೆ ಕಂಡು ಉಳಿದ ತಪಸ್ವಿಗಳು ತಲೆತಗ್ಗಿಸುತ್ತಿದ್ದರು.

ನಗ್ನತೆಯ ಉಪದೇಶದ ಅರ್ಥವೂ ಇದೆ ಆಗಿದೆ. ಅಚೇಲಕತ್ವವು ಅಪರಿಗ್ರಹದ ಆದರ್ಶ ಪರಿಸೀಮೆ. ಅಚೇಲಕನಾಗಿದ್ದು ತನ್ನ ಅವಶ್ಯಕತೆಗಳನ್ನು ತೀರ ಕಡಿಮೆ ಮಾಡಿಕೊಂಡು, ಆತ್ಮಶುದ್ಧಿಯನ್ನು ಸಂಪಾದಿಸಬೇಕು. ಸೂತ್ರಕೃತಾಂಗದಲ್ಲಿ ನಗ್ನವಾಗಿದ್ದು ತಿಂಗಳ-ತಿಂಗಳವರೆಗೆ ಉಪವಾಸವಿದ್ದು ಕೂಡ ಮನದಲ್ಲಿಯ ಮಾಯೆ ನಷ್ಟವಾಗದಿದ್ದರೆ, ತಪದ ಸಿದ್ಧಿಯಾಗದೆಂದು ಹೇಳಿದೆ. 24 ಆಚಾರ್ಯ ಕುಂದ ಕುಂದಾಚಾರ್ಯರು ಕೂಡ ತಮ್ಮ 'ಭಾವ ಪ್ರಾಭೃತ'ದಲ್ಲಿ ಅಂತರಂಗ ಶುದ್ಧಿಯಿಲ್ಲದೆ ಕೋಟಿ ವರುಷ ತಪಸ್ಸು ಮಾಡಿದರೂ ಮುಕ್ತಿಯಿಲ್ಲವೆಂದು ಹೇಳಿದ್ದಾರೆ. ತಪ ಹಾಗೂ ತ್ಯಾಗದ ಉಚ್ಚ ಭಾವನೆಯೇ ಮಾನವನನ್ನು ಅಹಿಂಸೆಯ ಸಮೀಪಕ್ಕೆ ಒಯ್ದು, ಪ್ರಪಂಚವನ್ನು ಹೆಚ್ಚಾಗಿ ಶಾಂತಿಯಲ್ಲಿ ಅಭಿವೃದ್ಧಿಗೊಳಿಸಲು ಸಮರ್ಥವಾಗುವುದು, ಇದೇ ಮಹಾವೀರನ ಆದೇಶವಾಗಿದೆ. ಎಲ್ಲ ಜೀವಿಗಳು ಸಮಾನವಾಗಿವೆ.

ಮಹಾವೀರನ ಅನುಯಾಯಿಗಳಲ್ಲಿ ಎಲ್ಲ ಧರ್ಮದವರೂ ಇದ್ದರು. ಮ್ಲೇಚ್ಛ, ಜಾಲಗಾರ, ಚಾಂಡಾಲಪುತ್ರರಿಗೆ ಕೂಡಾ ದೀಕ್ಷೆ ಕೊಟ್ಟಿದ್ದಾನೆ.

ಚಂದನಬಾಲೆಯು ಮಹಾವೀರನ ಪ್ರಥಮಶಿಷ್ಯೆಯೂ ಭಿಕ್ಷುಣೀ ಸಂಘದ ಆದಿಷ್ಠಾತ್ರಿಯೂ ಆಗಿದ್ದಳು. ಜೈನ ಗ್ರಂಥಗಳಲ್ಲಿ ಸ್ತ್ರೀರತ್ನವು ಚಕ್ರವರ್ತಿಯ ಹದಿನಾಲ್ಕು ರತ್ನಗಳಲ್ಲಿ ಒಂದೆಂದು ಹೇಳಲಾಗಿದೆ. ಅಲ್ಲದೆ, ಜಲ, ಅಗ್ನಿ, ದುಷ್ಟರು, ದುಷ್ಕಾಲ ಇವುಗಳಿಂದ ಸಂಕಟ ಬಂದಾಗ, ಸ್ತ್ರೀಯರನ್ನು ಮೊದಲು ರಕ್ಷಿಸಬೇಕೆಂದೂ ಹೇಳಿದೆ. ಇವೆಲ್ಲ ನಿರೀಕ್ಷಿಸಿದರೆ, ನಿಃಸಂದೇಹವಾಗಿ ಮಹಾವೀರನು ಸ್ತ್ರೀಯರ ಉನ್ನತಿಗಾಗಿಯೂ ಶ್ರಮಿಸಿದ್ದನೆಂದು ಹೇಳಬೇಕಾಗುತ್ತದೆ.

ಪ್ರತಿ ಪ್ರಾಣಿಗಳ ಕಲ್ಯಾಣ, ಸಮಸ್ತ ಜೀವಿಗಳ ರಕ್ಷಣೆಗಾಗಿ ಸಂದೇಶ ನೀಡಿದನು. ಮನುಷ್ಯನಿಗೆ ಮೈತ್ರಿ ಹಾಗೂ ಪ್ರಮೋದದ ಶಿಕ್ಷಣ ನೀಡಿದ. ಅಹಿಂಸೆ, ಸತ್ಯ, ಅಚೌರ್ಯ (ಕಳ್ಳತನ ಮಾಡಬಾರದು), ಬ್ರಹ್ಮಚರ್ಯ, ಉಪದೇಶಿಸಿದ. ಇವು ಸಂತೋಷ, ಶಾಂತಿ, ಪ್ರೇಮ, ಧರ್ಮದ ಮಾರ್ಗಗಳೆಂದು ಹೇಳಿದ.

ಒಂದು ಕಡೆಗೆ ಭಗವಾನ್ ಮಹಾವೀರನು ಮದುವೆ ಆಗಿ ಮಕ್ಕಳನ್ನು ಪಡೆದಿದ್ದನು. ಆತ್ಮಕಲ್ಯಾಣದ ಉದ್ದೇಶದಿಂದ ಎಲ್ಲ ತ್ಯಜಿಸಿದನು ಎಂದು ಬರೆದಿದ್ದಾರೆ. ಪ್ರತಿಯೊಬ್ಬನು ರಾಷ್ಟ್ರವನ್ನು ಕಟ್ಟಲಿಕ್ಕೆಂದು ತನ್ನ ಶಕ್ತಿ ಸಂಪತ್ತುಗಳನ್ನೆಲ್ಲ ವ್ಯಯಿಸಲು ಸಿದ್ಧನಾಗಬೇಕು. ಜೈನಧರ್ಮದಲ್ಲಿ 2 ಮುಖ್ಯ ಪಂಗಡಗಳು. 1. ಶ್ವೇತಾಂಬರ 2. ದಿಗಂಬರ. ಮತ್ತೆ ಶ್ವೇತಾಂಬರದಲ್ಲಿ ದೃಷ್ಟವಾದದ 5 ಭೇದ 1. ಪರಿಕರ್ಮ 2. ಸೂತ್ರ 3. ಪೂರ್ವಗತ 4. ಅನುಯೋಗ 5. ಚೂಲಿಕಾ .

ದಿಗಂಬರ ಸಂಪ್ರದಾಯದಲ್ಲಿ 1. ಪರಿಕರ್ಮ 2. ಸೂತ್ರ 3. ಪ್ರಥಮಾನುಯೋಗ 4. ಪೂರ್ವಗತ 5. ಚೂಲಿಕಾ. ಮತ್ತೆ ಶ್ವೇತಾಂಬರದಲ್ಲಿ 7 ಉಪಭೇದ, ದಿಗಂಬರ ಸಂಪ್ರದಾಯದಲ್ಲಿ 5 ಉಪಭೇದಗಳಿವೆ.

"ಅತೀ ಕಠಿಣ ವ್ರತ ಸಲ್ಲೇಖನ ವ್ರತ", "ಸಲ್ಲೇಖನ ವ್ರತ" ಆತ್ಮದ ಸಾಕ್ಷಾತ್ಕಾರಕ್ಕಾಗಿ ಉಪವಾಸವಿದ್ದು ದೇಹದಂಡನೆ ಮಾಡಿ ಪ್ರಾಣ ತ್ಯಾಗ ಮಾಡುವಂತಹದು.

ಇನ್ನು ಮಹಾವೀರನು ತನ್ನ ಸಿದ್ಧಾಂತದ ಪ್ರಚಾರ ಮಾಡಲಿಕ್ಕೆಂದು ಸಾಧು, ಸಾಧ್ವಿ, ಶ್ರಾವಕ, ಶ್ರಾವಿಕಾ ಈ ಪ್ರಕಾರ ಚತುರ್ವಿಧ ಸಂಘ ಸ್ಥಾಪಿಸಿದರು. ಪ್ರಚಾರಕ್ಕಾಗಿ ಮಗಧ, ಮಿಥಿಲಾ ಹೀಗೆ ಸಂಚರಿಸುತ್ತಾ ದಕ್ಷಿಣ ಭಾರತದಲ್ಲಿ ಭಗವಾನ್ ಮಹಾವೀರನು ಸಂಚರಿಸಿದ ಉಲ್ಲೇಖಗಳು ಜೈನ ಸಾಹಿತ್ಯದಲ್ಲಿ ಸಿಗುತ್ತವೆ. ಆ ಕಾಲದಲ್ಲಿ ಕಾಂಚೀಪುರ, ಹೇಮಾಂಗದೇಶ (ಮೈಸೂರು), ಸಾತಾರಾ ಜಿಲ್ಲೆಯೊಳಗಿನ ಕುಂಡಲಗ್ರಾಮ, ಉಜ್ಜಯಿನಿ ಹತ್ತಿರಿರುವ ಪಾದನಪುರು ಹೀಗೆ ದೇಶದ ನಾನಾ ಭಾಗಗಳಲ್ಲಿ ಸಂಚರಿಸಿ ಸತ್ಯ, ಅಹಿಂಸೆ ವಿಷಯಗಳ ಪ್ರಚಾರ ಮಾಡಿ, ಅನೇಕರಿಗೆ ಜಿನ ಧರ್ಮದ ದೀಕ್ಷೆ ನೀಡಿದನು. "ಕರ್ನಾಟಕದ ದೊರೆಗಳು ಬಿಹಾರದಲ್ಲಿ ಆಳಿದರೆನ್ನುವ ಬಗೆಗೆ ಉಲ್ಲೇಖಗಳಿವೆ". ಕನ್ನಡ ನಾಡಿನ ಆಕರ್ಷಣೆ ಭಾರತದ ಜನರಿಗೆಲ್ಲ ಕ್ರಿಸ್ತಪೂರ್ವದಲ್ಲಿಯೇ ಕಂಡಿದ್ದಿತು. ತಮಗೆ ಆರಕ್ಷಣೆ ಎನಿಸಿದ ಜನರು ಕರ್ನಾಟಕಕ್ಕೆ ಬಂದು ರಕ್ಷಣೆ ಪಡೆಯುತ್ತಿದ್ದರು. ಹನ್ನೆರಡು ವರ್ಷಗಳ ಭೀಕರ ಕ್ಷಾಮ, ಚಂದ್ರಗುಪ್ತ ಮೌರ್ಯನ ಕಾಲದಲ್ಲಿ ಕಾಣಿಸಿಕೊಂಡಾಗ, ಭದ್ರಬಾಹು ಮುನಿಗಳು ತಮ್ಮ ನೂರಾರು ಶಿಷ್ಯರೊಂದಿಗೆ ಕನ್ನಡ ನಾಡಿನ ಶ್ರವಣಬೆಳಗೊಳಕ್ಕೆ ಬಂದು ರಕ್ಷಣೆ ಪಡೆದರೆನ್ನುವುದು ಇತಿಹಾಸವು ದಾಖಲಿಸಿದ ಸತ್ಯ ಸಂಗತಿ. ಅವರು ಶ್ರವಣಬೆಳಗೊಳಕ್ಕೆ ಬಂದ ಐತಿಹ್ಯದ ಸಾಕ್ಷಿಯಾಗಿ ಅಲ್ಲಿ "ಚಂದ್ರಗಿರಿ" ಬೆಟ್ಟವಿದೆ.

ಕ್ರಿ.ಪೂ. 1500 ರಿಂದ 800 ವರೆಗೆ ಮಧ್ಯ ಭಾರತದಲ್ಲಿ ದ್ರಾವಿಡರು ವಾಸಿಸುತ್ತಿದ್ದರು. ದ್ರಾವಿಡ ಭಾಷೆಯ ಪದಗಳು 'ಬಲೂಚಿ' ಭಾಷೆಯಲ್ಲಿ ಇವೆ ಎಂದು ಹೇಳುತ್ತಾರೆ. ಅವು ಹೆಚ್ಚಾಗಿ ಕನ್ನಡ ಪದಗಳೆಂದು ಭಾಷಾಶಾಸ್ತ್ರಜ್ಞರು ನಮಗೆ ತಿಳಿಸುತ್ತಾರೆ. ಅವರಲ್ಲಿ ಸರ್ಪ, ವೃಕ್ಷ, ಲಿಂಗ ಪೂಜೆಯು ಪ್ರಚಾರದಲ್ಲಿತ್ತು ಎಂದು ಬಲ್ಲವರು ಹೇಳುವರು. ಇದನ್ನು ಗಮನಿಸಿದರೆ, ಮಧ್ಯ ಭಾರತದಲ್ಲಿ ಶಿವೋಪಾಸಕರ ಪ್ರಾಬಲ್ಯವಿತ್ತು.

**ಮಹಾವೀರನ ನಿರ್ವಾಣ ಮತ್ತು ಅವನ ಕಾಲ**

ಭಗವಾನ್ ಮಹಾವೀರನು 12 ವರ್ಷಗಳವರೆಗೆ ದೀರ್ಘ ತಪಸ್ಸು ಮಾಡಿದನು. 30 ವರ್ಷ ಲೋಕಕಲ್ಯಾಣಕ್ಕಾಗಿ ಧರ್ಮೋಪದೇಶ ಮಾಡುತ್ತ ಸಂಚರಿಸಿದನು. ಕೊನೆಗೆ ಪಾವಾಪುರಿಗೆ (ಬಿಹಾರ) ಬಂದನು. ಅಲ್ಲಿಯ ರಾಜನಾದ ಹಸ್ತಿಪಾಲನು ಭಗವಾನರ ಚಾತುರ್ಮಾಸದ ವ್ಯವಸ್ಥೆ ಮಾಡಿದನು. ಪ್ರತಿದಿನ ಧರ್ಮಸಭೆಗೆ ಉಪದೇಶ ಕೇಳಲು ದೂರ ದೂರ ದೇಶಗಳಿಂದ ಜನರು ಬರತೊಡಗಿದರು. 4ನೇ ತಿಂಗಳೂ ಆರಂಭವಾಗಿ ಅರ್ಧ ಸರಿಯಿತು. ಅಂದು ಕಾರ್ತಿಕ ಕೃಷ್ಣ ಚತುರ್ದಶಿಯ ರಾತ್ರಿ ! ಅಮವಾಸ್ಯೆಯ ಪ್ರಾತಃಕಾಲವದು ! ಕತ್ತಲೆಯ ಉದಯದ ಸಮಯ! ಭಗವಾನ್ ಮಹಾವೀರ ನಿರ್ವಾಣ ಹೊಂದಿದ ಕ್ಷಣವದು. ಸಂವತ್ಸರಕ್ಕನುಸರಿಸಿ ಕ್ರಿ.ಪೂ. 527ರಲ್ಲಿ ನಿರ್ವಾಣ ಕಾಲವಾಗುವದು. ಮಹಾವೀರನಿಗೆ 72 ವರುಷಗಳಾಗಿದ್ದವು. ಭಗವಾನ್ ಮಹಾವೀರನ ನಶ್ವರ ದೇಹವು ನಷ್ಟವಾದರೇನಾಯಿತು? ಅವನು ನಮಗಾಗಿ ಭೂಮಿಯ ಮೇಲೆ ಬಿಟ್ಟು ಹೋದ ಧರ್ಮದೃಷ್ಟಿ ಅಜರಾಮರವಾಗಿದೆ. ಅವನ ಅಹಿಂಸಾ ಧ್ವಜವನ್ನು ಹಿಡಿದೆತ್ತಿ ಮುಂದೆ ಸಾಗೋಣ.



**ಡಾ. ಸುಮಂಗಲಾದೇವಿ.**

# R.V. Printing Press

**A HOUSE OF QUALITY PRINTING**

C-95, Okhla Industrial Area, Phase-I,
New Delhi - 110 020
Phone : 26815778, 41611143
Mobile : 9811104398, 9811604398
e-mail : rvprintingpress@gmail.com / hpgp2006@gmail.com

**ರಾಷ್ಟ್ರದ ರಾಜಧಾನಿಯಲ್ಲಿ ಕನ್ನಡಿಗರೊಬ್ಬರ**
**ಬಹುವರ್ಣದ ಸುಸಜ್ಜಿತ ಮುದ್ರಣಾಲಯ**

**ಆರ್.ವಿ. ಪ್ರಿಂಟಿಂಗ್ ಪ್ರೆಸ್** ಮತ್ತು **ಎಚ್.ಪಿ. ಗ್ರಾಫಿಕ್ ಪ್ರಿಂಟರ್ಸ್**

ನಾವು ಎಲ್ಲಾ ಬಗೆಯ ಮುದ್ರಣ ಕಾರ್ಯಗಳನ್ನು, ಸಮಯಕ್ಕೆ ಸರಿಯಾಗಿ ಅಚ್ಚುಕಟ್ಟಾಗಿ ಮಾಡಿಕೊಡುತ್ತೇವೆ.
ಪ್ರೊಸೆಸಿಂಗ್, ಪ್ಲೇಟ್ ಮೇಕಿಂಗ್, ಪ್ರಿಂಟಿಂಗ್ ಮತ್ತು, ಬೈಂಡಿಂಗ್ ಕೆಲಸಗಳಿಗಾಗಿ ನಮ್ಮನ್ನು ದಯವಿಟ್ಟು ಸಂಪರ್ಕಿಸಿರಿ.

**ಮುದ್ರಣವೂ ಒಂದು ಕಲೆ, ಅದುವೇ ನಮ್ಮ ನೆಲೆ**

## LOOKING FOR A JOB. . .?
## COME . . . JOIN US !

as

**MARKET RESEARCH : TELE-CALLER**

• Day Shifts only • Office Job • Attractive
emuneration • Part time option also available
• No Sales Calls / Pitches

Must have knowledge and fluency in Reading and Speaking
of Any Regional language (Punjabi, Kannada, Tamil, Telugu,
Malayalam, Gujarati, Oriya, Bengali, Assamese)

**With Either English or Hindi**

*at*

## IMRB INTERNATIONAL

(A Multi-National Research Organisation)
209-A, Masjid Moth-II, South Ext.-II, (Near Ansal Plaza)
New Delhi-110049

**Contact : Subhashish Datta**
**Board Line : 46077300, Ext. 4425/4416,**
**Mobile : 9871254836**

## ನೌಕರಿಯನ್ನು ಹುಡುಕುತ್ತಿದ್ದೀರಾ. . .?
## ಬನ್ನಿ . . . ನಮ್ಮ ಸಂಗಡ !

**ಮಾರ್ಕೆಟ್ ರೀಸರ್ಚ್ ಟೆಲಿ-ಕಾಲರ್**

• ಬೆಳಗ್ಗೆ ಕೆಲಸ ಮಾತ್ರ • ಆಫೀಸ್‌ನ ಕೆಲಸ
• ಆಕರ್ಷಕ ಸಂಬಳ • ಅರ್ಧ ದಿನ ಕೂಡ ಕೆಲಸ ಮಾಡಲು ಸೌಲಭ್ಯ
• ಸೇಲ್ಸ್ ಕರೆ ಅಲ್ಲ / ಪಿಚೆಸ್

ಯಾವುದೇ ಪ್ರಾದೇಶಿಕ ಭಾಷೆಯಲ್ಲಿ
(ಪಂಜಾಬಿ, **ಕನ್ನಡ**, ತಮಿಳು, ತೆಲುಗು, ಮಲಯಾಳಂ, ಗುಜರಾತಿ,
ಮರಾಠಿ, ಒರಿಯಾ, ಬಂಗಾಳಿ, ಅಸ್ಸಾಮಿ)

ಓದಲು ಮತ್ತು ಮಾತನಾಡಲು
ಒಳ್ಳೆಯ ತಿಳುವಳಿಕೆ ಮತ್ತು ಮಾಹಿತಿ ಅವಶ್ಯಕ ಜೊತೆಗೆ ಇಂಗ್ಲಿಷ್ ಅಥವಾ ಹಿಂದಿ
**ಭಾಷೆಯ ಜ್ಞಾನ ಅವಶ್ಯಕ**

## ಐಎಂಆರ್‌ಬಿ ಇಂಟರ್‌ನ್ಯಾಶನಲ್

(ಮಲ್ಟಿ ನ್ಯಾಶನಲ್ ರೀಸರ್ಚ್ ಆರ್ಗನೈಸೇಶನ್)
209-ಎ, ಮಸ್ಜೀದ್ ಮೋಟ್-II
ಸೌತ್ ಎಕ್ಸ್- II, (ಅನ್ಸಾಲ್ ಪ್ಲಾಜ ಹತ್ತಿರ)
ನವದೆಹಲಿ-110049

**ಸಂಪರ್ಕಿಸಿ : ಸುಭಾಶಿಸ್ ದತ್ತ**
**ಬೋರ್ಡ್ ಲೈನ್ : 4607730 Extn. 4425/4416**
**ಮೊಬೈಲ್ : 9871254836**

ಕವನ

# ಅಶ್ರುತರ್ಪಣ

ಮೇ ಇಪ್ಪತ್ತೆರಡರ ಶನಿವಾರದಂದು
ಟೀವಿ ಆನ್ ಮಾಡಿದೆ ವಾರ್ತೆಗಳ ಕೇಳಲೆಂದು
ಕೇಳಲಾಗದ ಸಮಾಚಾರ ಪ್ರಸಾರವಾಗುತ್ತಿತ್ತು
ನಂಬಲಾಗದ ಕಹಿ ಸುದ್ದಿಯು ಮನವನು ಕಲಕಿತ್ತು.

ಏಎಕ್ಸ್-812 ವಿಮಾನ 166 ಜೀವಗಳ ಹೊತ್ತು
ದುಬೈನಿಂದ ಮಂಗಳೂರನು ಮುಂಜಾನೆ ತಲುಪಲಿತ್ತು
ಏನಾಯಿತೊ ಏನೊ ಅದರ ಗ್ರಹಚಾರ ಕೆಟ್ಟಿತ್ತು
ರನ್ವೇಯಲಿ ನಿಲಲಾಗದೆ ವೇಗದೆ ಸಾಗಿತ್ತು
ಆಯತಪ್ಪಿ ಜೋಲಾಡುತ ಕಂದಕವ ಸೇರಿತ್ತು.

ಕ್ಷಣಾರ್ಧದಲೆ ಎಲ್ಲ ಘಟನೆಯು ಘಟಿಸಿತ್ತು
ನೋಡುನೋಡುತಲೆ ಅದನು ಅಗ್ನಿಯು ಆವರಿಸಿತ್ತು
ತನ್ನ ಕೆನ್ನಾಲಿಗೆಗಳ ಚಾಚಿ ಧಗಧಗನೆ ಉರಿದಿತ್ತು
ಚೀರಾಟ-ಆಕ್ರಂದನ ಮುಗಿಲಮುಟ್ಟಿತ್ತು.

ಜೀವ ಉಳಿಸಿಕೊಳಲು ಜನಗಳ ಪರದಾಟ
ಇನ್ನೂ ನಿದಿರೆಯೊಳಿದ್ದ ಕಂದಮ್ಮಗಳ ಚೀರಾಟ
ಯಾವುದನು ಲೆಕ್ಕಿಸದೆ ಎಲ್ಲ ಕಬಳಿಸುತ್ತಿತ್ತು
ಸುಟ್ಟ ಮಾಂಸ-ಮೂಳೆಗಳ ಕಂಟು ಸುತ್ತೆಲ್ಲ ಪಸರಿಸಿತ್ತು.

ಹದಿನೈದಿಪ್ಪತ್ತು ಜನ ಒಂದೇ ಕುಟುಂಬದವರಾಗಿ
ಪಯಣಿಸಿದ್ದರು ತಮ ಅಜ್ಜಿಯ ಅಂತ್ಯಕ್ರಿಯೆಗಾಗಿ
ಭಯಂಕರ ಅಂತ್ಯದ ಮುನ್ಸೂಚನೆ ಇಲ್ಲದವರಾಗಿ
ಸೇರಿದರು ಮತ್ತೆ ಬರಲಾಗದ ಜಾಗವ ಹಿಂತಿರುಗಿ.

ಇನ್ನೂ ಪ್ರಪಂಚವನೆ ಅರಿಯದ ಎಳೆಗೂಸುಗಳು
ಹೊಟ್ಟೆಹೊರೆಯುದಕಾಗಿ ದುಬೈ ಸೇರಿದ ಜನಗಳೂ
ಅಂದದ ಗಗನಸಖಿಯರು-ಅನುಭವೀ ಪೈಲಟ್ಟುಗಳು
ಚೆಂದದ ಜೀವದ ತೊರೆದು ಆದರು ಸುಟ್ಟ ಎಲುಬುಗಳು.

ತಮ್ಮ ಊರು-ತಮ್ಮ ಜನರನ್ನು ನೋಡಲು ಕಾತರಿಸಿ
ಏರಿದ್ದರು ವಿಮಾನವನು ನಾಳೆಯನು ನೆನೆಸಿ
ಬೆಳಗಾಗುವ ಮುನ್ನ ದುರ್ಘಟನೆಯು ಘಟಿಸಿ
ಸುಟ್ಟು ಕರಿಕಲಾಗಿದ್ದರು ಎಲ್ಲ ಕನಸುಗಳ ತುಂಡರಿಸಿ.

ಕಾಣದಾ ಆ ವಿಧಿಯ ಕ್ರೂರ ಆಟವನು ಕಂಡು
ಎದೆಯು ಝಲ್ಲೆಂದು-ಮನವು ತಲ್ಲಣಗೊಂಡು
ಕಣ್ಣೀರು ಹರಿದಿತ್ತು ದುಃಖ ಮಡುಗೊಂಡು
ಅಶ್ರುತರ್ಪಣಗೈದು ಕ್ಷಣಕಾಲ ಸ್ಥಬ್ಧಗೊಂಡು.

ಓ ವಿಧಿಯೇ. . . ನೀನೇಕೆ ಇಷ್ಟು ಕ್ರೂರ. . .?
ನಿನಗಾಗುತ್ತಿಲ್ಲವೇ ಹೃದಯ ಭಾರ. . .?
ಅವರ ಸೃಷ್ಟಿಸಿದ ನೀನೆ ನನ್ನನೂ ಸೃಷ್ಟಿಸಿದ್ದೆ ಆದಲ್ಲಿ
ಅವರೊಳಹ ಮಾನವತೆಯಂಶ ನನ್ನಲೂ ಇರುವುದೆ ಆದಲ್ಲಿ

ನನ್ನೊಂದು ಇಷ್ಟವ ಈಡೇರಿಸು ನೀ ಕನಿಕರಿಸಿ
ತನ್ನವರ ಕಳಕೊಂಡು ದುಃಖಿಸುತಿರುವರ
ಬಂಧು-ಮಿತ್ರರ ಮನದೆ ನನ ಮನದ ಭಾವಗಳ ತುಂಬಿ
ಸಾಂತ್ವನ ನೀಡುವ ಹಾಗೆ ಮಾಡು ನೀ ಪರಮಪಿತ
ಬೇಡಿಕೊಳುವೆ ನಿನಗೆ ನನ್ನೀ ಕರಗಳ ಜೋಡಿಸುತ. . .!



ಎಚ್.ವಿ. ಶಿವರುದ್ರಪ್ಪ

# ಕನ್ನಡತೀ...

ಕರಾವಳಿಯ ಕನ್ಯೆಯರು
ಭಾವನೆಗಳೇ ಇಲ್ಲದ ಬರಡು ಬೇತಾಳಗಳು
ಮಲೆನಾಡ ಬೆಡಗಿಯರೋ ಅಬ್ಬ !
ಕುದಿವ ಹಂಡೆ
ನವಭಾವಗಳು ಉಕ್ಕಿ ಹರಿವ
ಹುಚ್ಚುಹೊಳೆದಂಡೆ

ಮಹಾರಾಜರ ಮೈ
ಸೂರಿನಲ್ಲಿ ಈಗ
ಮಹಾರಾಣಿಯರಾರೂ ಇಲ್ಲ
ಹೆಜ್ಜೆಹೆಜ್ಜೆಗೆ ಎದುರು 'ಸಿಕ್ಕು'
ವವರು ಈ ಗಳಿಗೆ ಮುದ್ದುಕೋಳಿಮರಿ
ಮರುಗಳಿಗೆ ಉರಿಗಣ್ಣ ಹೆಮ್ಮಾರಿ
ಇವರೊಡನೆ ಏಗಲು ಆ ಮಹಿಷಾಸುರನೇ ಸರಿ

ಒಂದು ಕೇಜಿ ಹೆಣ್ಣನ
ಕಸು ಒಂದು ಕಪ್
ಸಣ್ಣಗೆ ಹೆಚ್ಚಿದ
ಎರಡು ದೊಡ್ಡ ಸೈಜಿನ ನಗೆಗಳು
ಚಿಟಿಕೆ ಕೋಪ
ಮುನಿಸು ರುಚಿಗೆ ತಕ್ಕಷ್ಟು
ಶುದ್ಧ ರಿಫೈನ್ಡ್ ಲವಲವಿಕೆ
ಯಲ್ಲ ಹದಿನೆಂಟು ವರ್ಷ ಹದವಾಗಿ
ಹುರಿದರೆ ತುಂಬುತ್ತದೆ ಕಣ್ಣು
ಧಾರವಾಡದ ಹೆಣ್ಣು

ಧಾರವಾಡದ ಹೆಣ್ಣು
ದಾಳಿಂಬೆ ಹಣ್ಣು
ಜತೆಗಿದ್ದರೆ ಈ ಬದುಕು
ಓಹ್ ಅದೆಷ್ಟು ಚೆನ್ನು !



ಪ್ರೇಮಶೇಖರ

# ಸಮಯವೆಲ್ಲಿದೆ?

ಸಮಯ ನಮಗಾಗಿ ಕಾಯುವುದಿಲ್ಲ
ಅದು ಜಾರಿ ಹೋಗುವ ಮುನ್ನ ಹಿಡಿದುಕೋಬೇಕು.
ಸಂತೋಷ ಎಲ್ಲರಲ್ಲೂ ಇದೆ.
ಆದರೆ ಮುಗುಳ್ನಗೆಗೆ ಸಮಯವಿಲ್ಲ
ದಿನ ರಾತ್ರಿ ಓಡುತ್ತಿರುವ ಪ್ರಪಂಚದಲ್ಲಿ
ಜೀವಿಸುವುದಕ್ಕೆ ಸಮಯವಿಲ್ಲ
ತಾಯಿ ಹಾಡಿದ ಲಾಲಿ ಜ್ಞಾಪಕವಿದ್ದರೂ
ಅಮ್ಮ ಎಂದು ಕರೆಯಲು ಟೈಮಿಲ್ಲ
ಎಲ್ಲರ ಸಂಬಂಧಗಳ ಕೊಂಡಿ ಕಳಚಿ ಬೀಳುತ್ತಿದೆ
ಆದರೆ ಹುಡುಕಲು ಸಮಯವಿಲ್ಲ
ಕಣ್ಣಿವೆ ನಿದ್ರೆಗೆ ಹಂಬಲಿಸುತ್ತಿದೆ
ಆದರೆ ಮಲಗಲು ಪುರಸೊತ್ತಿಲ್ಲ
ಹೃದಯ ಘಾಸಿಗೊಂಡಿದೆ
ಆದರೆ ಅದಕ್ಕೆ ಮಾಯಲು ಸಮಯವಿಲ್ಲ
ಹಣದ ಹಿಂದೆ ಪಡೆದ ಸಹಾಯವನ್ನು ನೆನಪಿಸಿಕೊಳ್ಳಲು ಸಮಯವಿಲ್ಲ.
ಕನಸು ಬೀಳುತ್ತಿದೆ
ಹಿಡಿದು ನನಸು ಮಾಡಲು ಸಮಯವಿಲ್ಲ
ನೀನೇ ಹೇಳು "ಬಾಳುವೆ"
ಇಂತಹ ಬಾಳೇಕೆ ಸಮಯ
ಪ್ರತಿಕ್ಷಣ ಸಾಯುವವರಿಗೆ
ಮನಃಪೂರ್ತಿ ಸಾಯಲೂ ಸಮಯವಿಲ್ಲ.
ಕಾಲಾಯ ತಸ್ಮೈ ನಮಃ



ಡಾ. ಅಹಲ್ಯಾಚಿಂತಾಮಣಿ

# PAVITRA SILKS & FABRICS



*Introducing New Item's*
*Silk-Cotton & Handlooms*

**Exhibition cum Sale**
Venue :
**Delhi Karnataka Sangha**
Sector-12, R.K. Puram,
Rao Tula Ram Marg
New Delhi-110022



| | |
|---|---|
| AP-Pochmapally | Silk Sarees & Cotton Suits (Kalamkari) |
| Karnataka -Mysore Silk | Silk Sarees & Fabrics |
| Bihar-Tassar Silk | Sarees |
| Kota (Rajasthan)-Chanderi | Sarees & Suits |
| Tamilnadu-Kanjeevaram | Sarees |
| AP-Mangalgiri-Venkatagiri & Gadwal | Sarees & Suits |
| Bengal-Kantha Work- | Sarees |

*For more details contact :* **RANI S. BANGERA**
**PAVITRA SILKS & FABRICS**
(Distributor of Mysore Silk for Northern India)
6B, First Floor, Hauz Khas Village, New Delhi - 110 016
Ph: 9810222773, 9313869163, 011-26510784
e-mail: pavitrasilks1@yahoo.co.in • Website : www.ksicsilk.com




ದಿನಾಂಕ 13.06.2010ರಂದು ಬೆಂಗಳೂರಿನ, ಎ.ಡಿ.ಎ. ರಂಗಮಂದಿರದಲ್ಲಿ "ಜನಪದರು" ಸಾಂಸ್ಕೃತಿಕ ವೇದಿಕೆ (ರಿ) ಹೊಸಕೋಟೆ, ಪ್ರಸ್ತುತಪಡಿಸಿದ ಸುರೇಶ್ ವರ್ತೂರು ಅವರ ನಿರ್ದೇಶನದ 'ಬುಡ್ಡನಾದ' ನಾಟಕ ದಲ್ಲಿ ಸಂಘದ ಕಾರ್ಯಕಾರಿ ಸಮಿತಿಯ ಸದಸ್ಯರಾದ **ಶ್ರೀ ಟಿ.ಎಂ. ಮೈಲಾರಪ್ಪ ಅವರು 'ಗಗನಂ ಮೊಗ್ಗನ್ನ'**ನ ಪಾತ್ರದಲ್ಲಿ ಅಭಿನಯಿಸಿದರು.

# ಅಖಿಲ ಭಾರತ ಹೊರನಾಡ ಕನ್ನಡಿಗರ ಸಮ್ಮೇಳನ



ನಾಡೋಜ ಡಾ. ಪಾಟೀಲ ಪುಟ್ಟಪ್ಪನವರಿಂದ ಸಮ್ಮೇಳನದ ಉದ್ಘಾಟನೆ

ಮೇ 30 ಮತ್ತು 31, 2010 "ಅಖಿಲ ಭಾರತ ಹೊರನಾಡ ಕನ್ನಡಿಗರ ಸಮ್ಮೇಳನವನ್ನು" "ಕರ್ನಾಟಕ ವಿದ್ಯಾವರ್ಧಕ ಸಂಘ" ಧಾರವಾಡ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು ಇವರ ಸಹಯೋಗದೊಂದಿಗೆ ನಡೆಯಿತು. ಈ ಸಂದರ್ಭದಲ್ಲಿ "ಹೊರನಾಡ ಕನ್ನಡಿಗರ ಸಮಸ್ಯೆಗಳು-ಪರಿಹಾರಗಳು ಅಂದು-ಇಂದು-ಮುಂದು ಚಿಂತನೆ" ಎನ್ನುವ ವಿಷಯದಲ್ಲಿ 2 ದಿನಗಳ ವಿಚಾರಗೋಷ್ಠಿ ಕಾರ್ಯಕ್ರಮವನ್ನು ಏರ್ಪಡಿಸಿದರು. ಇದರಲ್ಲಿ ದೇಶದ ವಿವಿಧ ಭಾಗಗಳಿಂದ ಬಂದ ಸಾಧಾರಣ 600 ಜನ ಪ್ರತಿನಿಧಿಗಳು ಭಾಗವಹಿಸಿದ್ದರು. 30.05.2010ರಂದು ಬೆಳಗ್ಗೆ 10.30ಕ್ಕೆ ಉದ್ಘಾಟನಾ ಸಮಾರಂಭವನ್ನು ಶ್ರೀ ತರಳುಬಾಳು ಪೂಜ್ಯ ಜಗದ್ಗುರು ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮಿಗಳ ಸಾನ್ನಿಧ್ಯದಲ್ಲಿ ನಾಡೋಜ ಡಾ. ಪಾಟೀಲ ಪುಟ್ಟಪ್ಪನವರ ಅಧ್ಯಕ್ಷತೆಯಲ್ಲಿ ಘನತೆವೆತ್ತ ಶ್ರೀ ಹಂಸರಾಜ ಭಾರಧ್ವಾಜ, ರಾಜ್ಯಪಾಲರು, ಕರ್ನಾಟಕ ಸರ್ಕಾರ, ಇವರಿಂದ ಕಾರ್ಯಕ್ರಮ ವಿಜೃಂಭಣೆಯಿಂದ ಜ್ಯೋತಿ ಬೆಳಗಿಸುವ ಮೂಲಕ ಉದ್ಘಾಟಿಸಲ್ಪಟ್ಟಿತ್ತು.

ಮುಖ್ಯ ಅತಿಥಿಗಳಾಗಿ ಶ್ರೀ ಜಗದೀಶ ಶೆಟ್ಟರ್, ಜಿಲ್ಲಾ ಉಸ್ತುವಾರಿ ಹಾಗೂ ಗ್ರಾಮೀಣ ಅಭಿವೃದ್ಧಿ ಸಚಿವರು, ಗಡಿನಾಡು ಪ್ರಾಧಿಕಾರದ ಅಧ್ಯಕ್ಷ ಚಂದ್ರಕಾಂತ ಬೆಲ್ಲದ, ಶ್ರೀ ವೀರಣ್ಣ ಮತ್ತಿಕಟ್ಟಿ, ಸಭಾಪತಿಗಳು, ಕರ್ನಾಟಕ ವಿಧಾನ ಪರಿಷತ್, ಶ್ರೀಮತಿ ಸೀಮಾ ಮಸೂತಿ, ಶಾಸಕರು, ಶ್ರೀ ಮನುಬಳಿಗಾರ್, ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಡಾ. ಅಹಲ್ಯಾ ಚಿಂತಾಮಣಿ ಹಾಗೂ ಡಾ. ಸುಮಂಗಲಾದೇವಿಯವರು ವೇದಿಕೆಯಲ್ಲಿದ್ದರು. ಶ್ರೀ ಮನುಬಳಿಗಾರ್ ನಿರ್ದೇಶಕರು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರು ಕನ್ನಡ ಭಾಷೆಯ ವೆಬ್‌ಸೈಟನ್ನು ಬಿಡುಗಡೆ ಮಾಡಿದರು.

ನಾಡೋಜ ಡಾ. ಪಾಟೀಲ ಪುಟ್ಟಪ್ಪನವರು ಮಾತನಾಡಿ ಕರ್ನಾಟಕ ವಿದ್ಯಾವರ್ಧಕ ಸಂಘ ಕರ್ನಾಟಕದ ಏಕೀಕರಣದ ನೇತೃತ್ವವನ್ನು ವಹಿಸಿ ಹೋರಾಡಿ, 'ಭಾರತ ದೇಶದ ಭೂಪಟದಲ್ಲಿ ಕನ್ನಡ ರಾಜ್ಯದ ನಕಾಶೆ ಮೂಡಲು ಕಾರಣವಾಯಿತು'- ಎಂದು ಹೇಳಿ ಐತಿಹಾಸಿಕ ಸಮ್ಮೇಳನದ ಉದ್ದೇಶಗಳನ್ನು ವಿವರಿಸಿದರು.

ಶ್ರೀ ಮನು ಬಳಿಗಾರ್ ಮಾತನಾಡುತ್ತ ಈಗಿನ ತಾಂತ್ರಿಕ ಯುಗದಲ್ಲಿ ಕಂಪ್ಯೂಟರ್ ಅತೀ ಮಹತ್ವದ ಸ್ಥಾನ ಹೊಂದಿದೆ. ವಿಶ್ವದ ಎಲ್ಲ ಭಾಗಗಳಿಗೆ ಕನ್ನಡ ಭಾಷೆ ಕಲಿಸುವಿಕೆ, ಕರ್ನಾಟಕದ ಸುದ್ದಿ ಸಮಾಚಾರ ಹಾಗು ಮಾಹಿತಿ ಸಹಾಯ ಇಂಥ ಎಲ್ಲದಕ್ಕೂ ಅನುಕೂಲವಾಗಲು ಕನ್ನಡದ ವೆಬ್‌ಸೈಟನ್ನು (ಅಂತರ್ಜಾಲ) ಸಿದ್ಧಪಡಿಸಿದ್ದನ್ನು ಬಿಡುಗಡೆ ಮಾಡಿದರು. ಅವರು ಇಂದು ತಂತ್ರಾಂಶದಲ್ಲಿ ಕನ್ನಡದ ವೇಗೋತ್ಕರ್ಷವಾಗಬೇಕು, ಕನ್ನಡದ ಸಶಕ್ತೀಕರಣಗೊಳಿಸುವುದು ಹಿಂದೆಂದಿಗಿಂತಲೂ ಇಂದು ಅಗತ್ಯವಿದೆ ಎಂದರು.

ಶ್ರೀ ಜಿ.ಜಿ. ದೊಡ್ಡವಾಡ, ಶ್ರೀ ಬಿ.ವಿ. ಗುಂಜೆಟ್ಟಿ, ಹೊಳೆಣ್ಣವರ, ಕಲಾವಿದ ಭೀಮರಾವ್ ಮುರಗೋಡ, ಡಾ. ಸಿದ್ಧಲಿಂಗ ಪಟ್ಟಣ ಶೆಟ್ಟಿ, ಡಾ. ಡಿ.ಎಂ. ಹಿರೇಮಠ, ಶ್ರೀ ಶಂಕರ ಹಲಗತ್ತಿ, ಶ್ರೀ ಸದಾನಂದ ಶಿವಳ್ಳಿ, ಶ್ರೀ ಬಸವಪ್ರಭು ಹೊಸಕೇರಿ, ಇನ್ನೂ ಅನೇಕರು ಉದ್ಘಾಟನಾ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. .

"ಹೊರನಾಡಿನಲ್ಲಿ ಕನ್ನಡ-ಕನ್ನಡಿಗರ ಸ್ಥಿತಿ-ಗತಿ" ಗೋಷ್ಠಿಯ ಅಧ್ಯಕ್ಷತೆ ವಹಿಸಿದ್ದ ಡಾ. ಪಾಟೀಲ ಪುಟ್ಟಪ್ಪನವರು ಮಾತನಾಡುತ್ತಾ-

"ಎಲ್ಲಾದರು ಇರು ಎಂತಾದರು ಇರು

ಎಂದೆಂದಿಗೂ ನೀ ಕನ್ನಡವಾಗಿರು" ಎಂಬ ಕವಿವಾಣಿಯಂತೆ ಭಾರತದಾದ್ಯಂತ ಹಾಗೂ ವಿದೇಶದಲ್ಲಿ ನೆಲೆಸಿರುವ ಕನ್ನಡಿಗರು ಕನ್ನಡ ಸಂಸ್ಕೃತಿಯ ಪರಿಮಳವನ್ನು ಹರಡುತ್ತಿದ್ದಾರೆ. ಕರ್ನಾಟಕದ ರಾಜಧಾನಿಯಾದ ಬೆಂಗಳೂರಿಗಿಂತಲೂ ಇತರ ಪ್ರದೇಶಗಳಲ್ಲಿ ಹಾಗು ಭಾರತದ ರಾಜಧಾನಿಯಾದ "ದಿಲ್ಲಿ"ಯಲ್ಲಿ ಹೆಚ್ಚು ಅಭಿಮಾನದಿಂದ ಕನ್ನಡಪರ ಕಾರ್ಯಕ್ರಮ, ಕನ್ನಡ ಬೆಳವಣಿಗೆಯ ಬಗ್ಗೆ ಶ್ರಮ ವಹಿಸುತ್ತಿದ್ದಾರೆ. ನಾವು ಅವರನ್ನು ನಮ್ಮ ರಾಯಭಾರಿಗಳೆಂದು ಹೇಳುತ್ತೇವೆ. ಆದರೆ, ಅವರನ್ನು ತಿಳಿದುಕೊಳ್ಳುವ ಪ್ರಯತ್ನ ಮಾಡಿಲ್ಲ, ಅವರನ್ನು ಬಲಪಡಿಸುವುದಕ್ಕೆ ನಾವು ನಮ್ಮ ಕಿರು ಬೆರಳನ್ನೂ ಮೇಲಕ್ಕೆ ಎತ್ತಿಲ್ಲ. ಅವರ ತೊಡಕು ತೊಂದರೆಗಳನ್ನು ತಿಳಿದುಕೊಳ್ಳುವುದು, ಅವುಗಳಿಗೆ ಕರ್ನಾಟಕದ ಒಳಗೆ ಇರುವ ನಾವು ಎಷ್ಟರಮಟ್ಟಿಗೆ ಪರಿಹಾರ ಒದಗಿಸುವುದು ಸಾಧ್ಯ ಎನ್ನುವುದನ್ನು ಪರಿಶೀಲಿಸುವ ಮೇಳ ಇದು. ಇಂಥ ಮೇಳವನ್ನು ಸರ್ಕಾರವೇ ಈ ಮೊದಲು ಏರ್ಪಡಿಸಬೇಕಾಗಿತ್ತು. "ಕನ್ನಡ" ಮತ್ತು ತಮಿಳು ಅತ್ಯಂತ ಪ್ರಾಚೀನ ಭಾಷೆಗಳು ಜಗತ್ತಿನ ಪ್ರಾಚೀನ ಭಾಷೆಗಳಲ್ಲಿ ಎರಡೂ ಭಾಷೆಗಳಿಗೆ ಸ್ಥಾನ ಇದೆ. ಇಂಗ್ಲೆಂಡಿನಲ್ಲಿ ಇಂಗ್ಲಿಷ್ ಇಲ್ಲದಿದ್ದಾಗ ಕರ್ನಾಟಕದಲ್ಲಿ ಕನ್ನಡ ಇದ್ದಿತು. ಇಂಗ್ಲಿಷಿನ ಪ್ರಥಮ ಗ್ರಂಥ ಚಾಸರ್‌ನ 'ಕ್ಯಾಂಟರ್‌ಬರಿ ಕಥೆಗಳು' ಎಂಬುದು. ಕನ್ನಡದ 'ವಡ್ಡಾರಾಧನೆ' ಅದಕ್ಕಿಂತ ನೂರು ವರ್ಷ ಮೊದಲು ಬಂದಿದೆ. ಭಾರತದಲ್ಲಿ ತಮಿಳು ಲಿಪಿ ಬರುವುದಕ್ಕೆ ಮೊದಲು ಕನ್ನಡ ಲಿಪಿ ಬಂದಿದೆ. ಕನ್ನಡ ಸಂಸ್ಕೃತಿಯು ಭಾರತದ ತುಂಬೆಲ್ಲ ವ್ಯಾಪಿಸಿಕೊಂಡಿದೆ. ದ್ರಾವಿಡ ಭಾಷೆಯ ಪದಗಳು ಬಲೂಚಿ ಭಾಷೆಯಲ್ಲಿ ಇವೆ ಎಂದು ಹೇಳುತ್ತಾರೆ. ಅವು ಹೆಚ್ಚಾಗಿ ಕನ್ನಡ ಪದಗಳೆಂದು ಭಾಷಾ ಶಾಸ್ತ್ರಜ್ಞರು ನಮಗೆ ತಿಳಿಸುತ್ತಾರೆ ಎಂದರು.

ಡಾ. ಲಿಂಗಣ್ಣ ಗೋಣಾಳ ಉಸ್ಮಾನಿಯಾ ವಿಶ್ವವಿದ್ಯಾಲಯ, ಹೈದ್ರಾಬಾದ್ ಇವರು ಹೊರನಾಡು, ಗಡಿನಾಡು, ಇದರ ಅರ್ಥ ವಿವರಣೆ ನೀಡಿ, ಹೊರನಾಡಿಗೆ ಹೋಗುವ ಕಾರಣ ಉದಾ : ಉದ್ಯೋಗ, ಶಿಕ್ಷಣ, ವ್ಯಾಪಾರ ಇತ್ಯಾದಿ ಹೇಳಿ ಕೆಲವರಿಗೆ ಒಳ್ಳೆಯ ಅನುಭವ ಆದರೆ ಕೆಲವರಿಗೆ ಆತಂಕ, ಭಯದ ನೆರಳಿನಲ್ಲಿ ಜೀವನ ಸಂಘರ್ಷ ಮಾಡುತ್ತಾ ಬದುಕಿದ್ದಾರೆ. ಕೆಲವರ ಸ್ಥಿತಿ ತ್ರಿಶಂಕು ಸ್ಥಿತಿ ಇದೆ. ನಮ್ಮವರೇ ಕೆಲವೊಮ್ಮೆ ನಮ್ಮನ್ನು ಸಂಶಯದಿಂದ ಪರಕೀಯರನ್ನಾಗಿ ನೋಡುತ್ತಾರೆ. ಭಾರತ ದೇಶದಲ್ಲಿಯೇ ಇಂಥ ಘಟನೆಗಳು ಜರುಗುವಾಗ ವಿದೇಶದಲ್ಲಿ ಬೇರೆ ರೀತಿಯ ಕಷ್ಟಗಳಿರುತ್ತವೆ. ಹೀಗಾಗಿ ಸರ್ವಾಂಗೀಣ ಬೆಳವಣಿಗೆ ಆಗಬೇಕಾಗಿದೆ. ರಾಜ್ಯ ಹಾಗು ಕೇಂದ್ರ ಸರ್ಕಾರ, ಸಂಘ ಸಂಸ್ಥೆಗಳು ಸಹಾಯ ಸಹಕಾರ ನೀಡಿ ಆತ್ಮ ಸ್ಥೈರ್ಯ, ಧನ ಬಲ, ಜನಬಲ ನೀಡಬೇಕೆಂದು ಹೇಳಿದರು.

ಮುಖ್ಯ ಅತಿಥಿಗಳಾದ ದೆಹಲಿ ಕನ್ನಡ ವಿದ್ಯಾಸಂಸ್ಥೆಯ ಉಪಾಧ್ಯಕ್ಷೆ ಡಾ. ಅಹಲ್ಯಾ ಚಿಂತಾಮಣಿಯವರು ಮಾತನಾಡುತ್ತಾ ಕನ್ನಡಿಗರಿಗೆ ರಾಜ್ಯದ ಬೆಂಬಲ ಸಂಪೂರ್ಣವಾಗಿರಬೇಕು, ಸಹಕಾರ, ಜನ, ಧನಬಲ, ಬೆಂಬಲವೂ ಅತ್ಯಂತ ಅವಶ್ಯಕ. ಕನ್ನಡ ನಮ್ಮ ಮುಂದಿನ ಪೀಳಿಗೆಗೂ ವಿಸ್ತರಿಸಬೇಕು. ಎಲ್ಲಿ ಕನ್ನಡ ಕಳೆದ ುಹೋಗುತ್ತದೆಯೋ, ಎನ್ನುವ ಸಂಶಯವಿದೆ, ಕರ್ನಾಟಕ ಸರ್ಕಾರ ಗಣನೀಯವಾಗಿ ಸಹಾಯ ಮಾಡಬೇಕು. ಕೆಲವು ಮಸೂದೆ, ಠರಾವುಗಳನ್ನು ಸಿದ್ಧಪಡಿಸಿದ್ದನ್ನು ಕಾರ್ಯರೂಪಕ್ಕೆ ತರಬೇಕು. ಭಾಷಾಪ್ರೇಮ, ವಿದ್ಯಾಪ್ರಗತಿ-ಒಲವು ಏರ್ಪಡಲು ಕನ್ನಡ ಕಮ್ಮಟಗಳ ಘಟಕಗಳು ಭಾರತದ ಮೂಲೆ, ಮೂಲೆಯಲ್ಲಿರುವ ಮತ್ತು ಪರದೇಶದಲ್ಲಿರುವ ಕನ್ನಡಿಗರೆಲ್ಲರಿಗೂ ಅನುಕೂಲವಾಗುವಂತೆ ಸಂಘ, ಸಂಸ್ಥೆ ಸ್ಥಾಪಿಸಿ ಕನ್ನಡಿಗರು ಮುಂದುವರಿಯುತ್ತಿದ್ದಾರೊ ಅಲ್ಲಿ ಕಮ್ಮಟ ಘಟಕಗಳನ್ನು ಸ್ಥಾಪಿಸಿ ಸಕ್ರಿಯವಾಗಿ ಕೆಲಸ ಮಾಡಲು ಪದಾಧಿಕಾರಿಗಳನ್ನು ರಾಜ್ಯದ ವತಿಯಿಂದ ನೇಮಿಸಿ ಜವಾಬ್ದಾರಿಯುತವಾಗಿ ನಿರ್ವಹಿಸಲು ಸತತ ಪ್ರಯತ್ನ ನಡೆಸಬೇಕು. ಕನ್ನಡ ವಿದ್ಯಾವರ್ಧನೆ ಆಗುವಂತೆ ರಾಜ್ಯ ಸರ್ಕಾರ ಧನ ಸಹಾಯ, ನಿಯಮ-ರೀತಿ ನೀತಿ ಗುರುತಿಸಿ ಹೊರನಾಡ ಕನ್ನಡಿಗರಿಗೆ ಮಾರ್ಗ ತೋರಿಸಬೇಕು. ಕನ್ನಡದ ಕಲೆ, ಸಂಸ್ಕೃತಿ ಭಾಷೆಯಲ್ಲಿ ಪರಿಣಿತವಾಗುತ್ತಿರುವ ಯುವ ಜನರಿಗೆ ಮುಂದೆ 'ಅವರ ಜೀವನೋಪಾಯಕ್ಕೆ ಅನುಕೂಲವೂ ಆಗುವಂತೆ ಹೊರನಾಡುಗಳಲ್ಲಿ ಕೆಲಸ ಮಾಡಲು ರಾಜ್ಯ ಸರ್ಕಾರ ನೆರವು ನೀಡಿ ಭಾರತದ ಮುಖ್ಯ ರಾಜ್ಯಗಳಲ್ಲೂ, ಹಳ್ಳಿ, ಹಳ್ಳಿಗಳಲ್ಲೂ ಒಂದೊಂದು ಘಟಕಗಳನ್ನು ಸ್ಥಾಪಿಸಬೇಕು, ಗ್ರಂಥಾಲಯಗಳನ್ನು ಸ್ಥಾಪಿಸಬೇಕು ಎಂದರು.

"ದೆಹಲಿ ಕನ್ನಡಿಗ" ಸಂಪಾದಕ ಶ್ರೀ ಬಾ. ಸಾಮಗರವರು ಕರ್ನಾಟಕದ ಸಮಗ್ರ ಮಾಹಿತಿಯ ಸಂಗ್ರಹಾಲಯ ಹಾಗೂ ಕನ್ನಡಿಗರ ಪ್ರತಿಮೆಗಳ ಪ್ರತಿಷ್ಠಾಪನೆ. ಭಾರತದ ಎಲ್ಲ ಭಾಗಗಳಲ್ಲಿ

ಆಗಬೇಕೆಂದು ಹೇಳಿದರು. ಇನ್ನು ಇತರ ಅತಿಥಿಗಳೆಲ್ಲರೂ ತಮ್ಮ ತಮ್ಮ ಪ್ರದೇಶದ ಬಗ್ಗೆ ಮಾತನಾಡಿದರು ನಂತರ ಜಾನಪದ ಹಾಗು ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಿದವು.

ಎರಡನೇ ಗೋಷ್ಠಿ : (31.05.2010) "ಹೊರನಾಡ ಕನ್ನಡಿಗರ ಬದುಕು" ಎಂಬ ವಿಷಯವಾಗಿತ್ತು. ಪರಮಪೂಜ್ಯ ಶ್ರೀ ವಿಶ್ವೇಶತೀರ್ಥ ಸ್ವಾಮೀಜಿ,ಪೇಜಾವರ ಮಠ, ಉಡುಪಿಯವರು ಕನ್ನಡವನ್ನು ಜನ್ಮಕೊಟ್ಟ ತಾಯಿಯಂತೆ ಭಾವಿಸಿ ಅದನ್ನು ಪೋಷಿಸಿ ಬೆಳೆಸಬೇಕು, ಉದ್ಯೋಗಕ್ಕಾಗಿ ಬೇರೆ ಭಾಷೆಯಾಗಿ ಸ್ಥಾನಿಕ ಭಾಷೆ ಬಳಸುವ ಪ್ರಸಂಗ ಬರುವುದರಿಂದ ಜೀವನೋಪಾಯಕ್ಕೆ ಬಳಸಬೇಕಾಗುವುದು. ಜನ್ಮ ಕೊಟ್ಟ ತಾಯಿಗೆ ದ್ರೋಹ ಬಗೆಯದಂತೆ, ಅನ್ನ ನೀಡಿದ ತಾಯಿಗೆ ಅನ್ಯಾಯವಾಗದಂತೆ ಕನ್ನಡ ಬಳಸಿ, ಉಳಿಸಬೇಕು ಎಂದು ಕರೆಯಿತ್ತರು.

ಅಧ್ಯಕ್ಷತೆ ವಹಿಸಿದ್ದ ನಾಡೋಜ ಡಾ. ಪಾಟೀಲ ಪುಟ್ಟಪ್ಪನವರು ತನ್ನ ಜೀವಮಾನವನ್ನೇ ಕನ್ನಡಕ್ಕಾಗಿ ಮುಡುಪಾಗಿಟ್ಟಿದ್ದೇನೆ. ಕನ್ನಡಕ್ಕೆ ಅನ್ಯಾಯ ಮಾಡುವವರಿಗೆ ಭೂತವಾಗಿ ತೊಂದರೆ ಕೊಡುತ್ತೇನೆ ಎಂದು ಪಣತೊಟ್ಟಿದ್ದೇನೆ. 200 ವರ್ಷ ಆಳಿದ ಬ್ರಿಟಿಷರು ಇಂಗ್ಲೀಷ್ ಭಾಷೆ ಎಷ್ಟು ಬೇಗ ಬಿತ್ತಿ ಬೆಳೆಸಿದರು. ಕನ್ನಡದ ಬಗ್ಗೆ ಅಭಿಮಾನವಿದ್ದರೆ, ಎಲ್ಲವೂ ಸಾಧ್ಯ. ಇಂಗ್ಲಿಷ್ ಇಲ್ಲದೆ ಎಲ್ಲ ಉದ್ಯೋಗರಂಗಗಳಲ್ಲೂ ಕಾರ್ಯ ನಿರ್ವಹಿಸುವಂತಾಗಬೇಕು. ಐ.ಎ.ಎಸ್. ಮೇಲಾಧಿಕಾರಿಗಳಿಗೆ ಕಡ್ಡಾಯ ಕನ್ನಡ ಕಲಿಸಬೇಕು. ಹೊರನಾಡ, ಕನ್ನಡಿಗರಿಗೆ ವಿದೇಶದವರಿಗೂ ಕನ್ನಡ ಕಲಿಸುವ ಶಾಲೆಗಳು ತೆರೆಯಬೇಕು. ಪ್ರತಿ ಪ್ರದೇಶದಲ್ಲಿ ಕನ್ನಡ ಕಲಿಸುವ ಗುರುಗಳನ್ನು ನೇಮಿಸಲೇಬೇಕು. ಇದು ತೀವ್ರ ತಕ್ಷಣ ಜಾರಿಯಲ್ಲಿ ಬರಬೇಕು ಎಂದರು. ಕೆಲವು ವಿದೇಶದವರು ಮೈಸೂರಿನ ಕನ್ನಡ ಅತೀ ಮಂಜುಳವಾಗಿ ಕಲಿತು ಮಾತನಾಡಿದ ಉದಾಹರಣೆ ನೀಡಿದರು. ಶ್ರೀ ಬಸವರಾಜ ಹೊಸಕೇರಿಯವರು ಮಸೂದೆ, ಠರಾವುಗಳನ್ನು ಮಂಡಿಸಿದರು.

ಆನಂತರ ಹೊರನಾಡ ಕನ್ನಡ ಪ್ರತಿನಿಧಿಗಳ ಮಾತುಗಳಾದವು. ದೆಹಲಿ ಸ್ನೇಹಾ ಲೇಡಿಸ್ ಕ್ಲಬ್ ವತಿಯಿಂದ ಡಾ. ಸುಮಂಗಲಾದೇವಿಯವರು ದೆಹಲಿಯಂತಹ ಪ್ರದೇಶದಲ್ಲಿ ಕನ್ನಡಿಗರಿಗಾಗಿ ಮಹಿಳಾ ವಸತಿ ಗ್ರಹ ಆಗಬೇಕಾಗಿದೆ. ಹಾಗು ಕನ್ನಡಪರ ಅತ್ಯುತ್ತಮ ಕಾರ್ಯನಿರ್ವಹಿಸುವಂತಹ ಮಹಿಳಾ ಮಂಡಳಿಗಳಿಗೆ ಸ್ವಂತ ಕಟ್ಟಡ, ದಿಲ್ಲಿಯಲ್ಲಿ ಇನ್ನೊಂದು ಕನ್ನಡ ಶಾಲೆ ತೆರೆಯಲು ಸ್ಥಳಾವಕಾಶ ಹಾಗು ಕನ್ನಡದಲ್ಲಿ ಕಂಪ್ಯೂಟರ್ ಟೈಪ್ (ಬೆರಳಚ್ಚು), ಹಾಗೂ ಕನ್ನಡ ಕಲಿಸುವ ಶಿಕ್ಷಕರಿಗೆ ಆಯ್ಕೆ ಮಾಡಿ ಇಲ್ಲಿ ಅದರ ಸೌಲಭ್ಯ ಎಲ್ಲರಿಗೂ ದೊರೆತು ಕನ್ನಡ ಭಾಷೆ ಬೆಳೆಯುವ ನಿಟ್ಟಿನಲ್ಲಿ ಸಹಾಯ, ಪ್ರೋತ್ಸಾಹ ಬೇಕೆಂದು ಕೋರಿದರು.




ಎರಡು ದಿನಗಳ ವಿಚಾರಗೋಷ್ಠಿ

ದೆಹಲಿಯ ಹೆಸರಾಂತ ಕಲಾವಿದ ಶ್ರೀ ಭೀಮರಾವ್ ಮುರಗೋಡರವರು ಕನ್ನಡ ಕಲೆಗಾಗಿ ಇನ್ನು ಸಹಕಾರ ಹಾಗೂ ಪ್ರೋತ್ಸಾಹ ಬೇಕು. 12ನೇ ಶತಮಾನದ ಬಸವೇಶ್ವರರ ಹಾಗು ಬುದ್ಧ, ಅಂಬೇಡ್ಕರ ಕಾರ್ಯಕ್ರಮ ತಾವು ಪ್ರತಿ ಹಂತದಲ್ಲಿ ಕಲೆಯ ಮೂಲಕ ತಮ್ಮ ಕುಟುಂಬದವರು ಪ್ರಚಾರ ಮಾಡುತ್ತಿದ್ದೇವೆ ಎಂದು ಹೇಳಿದರು. ದೆಹಲಿ ಕರ್ನಾಟಕ ಸಂಘ ಸಹಾಯ ಹಸ್ತ ನೀಡುತ್ತಿದೆ. ಕರ್ನಾಟಕದಿಂದ ಕಲೆಗೆ ಇನ್ನೂ ಹೆಚ್ಚಿನ ಪ್ರೋತ್ಸಾಹ ಸಿಗಬೇಕೆಂದರು. ದೆಹಲಿ ಕನ್ನಡ (ಸ್ನೇಹಾ) ಲೇಡಿಸ್ ಕ್ಲಬ್ ವತಿಯಿಂದ ರಾಧಾ ಕೌಜಲಗಿಯವರು 2ದಿನಗಳ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. 91 ವರ್ಷ ಹಿರಿಯರಾದ ಡಾ. ಪಾಟೀಲ ಪುಟ್ಟಪ್ಪನವರು ಸಮ್ಮೇಳನದ ಮುಖ್ಯ ರುವಾರಿಯಾಗಿ ಸಮ್ಮೇಳನವನ್ನು ಯಶಸ್ವಿಯಾಗಿಸಿದ್ದನ್ನು ಯುವ ಜನಾಂಗ ಅರಿತು ಕನ್ನಡದ ಉಳಿವು ಮತ್ತು ಬೆಳವಣಿಗಾಗಿ ದುಡಿಯಬೇಕಾಗಿದೆ.

— ಡಾ. ಸುಮಂಗಲಾದೇವಿ

## ಶ್ರೀ ರಾಮಾಯಣ ಮಹಾನ್ವೇಷಣಂ ಆಂಗ್ಲ ಭಾಷಾ ಆವೃತ್ತಿ ಬಿಡುಗಡೆ



ಡಾ. ವೀರಪ್ಪ ಮೊಯಿಲಿಯವರು ಪ್ರಧಾನಮಂತ್ರಿಗಳಿಗೆ ಕೃತಿಯನ್ನು ನೀಡಿದಾಗ


ನವದೆಹಲಿಯ ಸಾಯಿ ಇಂಟರ್‌ನ್ಯಾಶನಲ್‌ನಲ್ಲಿ ನಡೆದ ಕಾರ್ಯಕ್ರಮದಲ್ಲಿ ಕೇಂದ್ರ ಕಾನೂನು ಹಾಗೂ ನ್ಯಾಯ ಮಂತ್ರಿಗಳಾದ ಸನ್ಮಾನ್ಯ ಡಾ. ವೀರಪ್ಪ ಮೊಯಿಲಿಯವರ "ಶ್ರೀ ರಾಮಾಯಣ ಮಹಾನ್ವೇಷಣಂ The great quest of Ramayana" ಎಂಬ ಪುಸ್ತಕ ಬಿಡುಗಡೆ ಸಮಾರಂಭದಲ್ಲಿ ಭಾರತದ ಮುಖ್ಯ ನ್ಯಾಯಧೀಶರಾದ ಜಸ್ಟೀಸ್ ಸರೋಶ್ ಹೋಮಿ ಕಪಾಡಿಯಾ ಅವರು ಮಾತನಾಡುತ್ತಾ–"ಧರ್ಮದಲ್ಲಿರುವ ತತ್ವಗಳನ್ನು ಅಳವಡಿಸಿಕೊಂಡರೆ, ಭಾರತದ ಏಳಿಗೆ ಹಾಗೂ ಉನ್ನತಿ ಸಾಧ್ಯ" ಎಂದು ಒತ್ತಿ ಹೇಳಿದರು. ವಾಲ್ಮೀಕಿ ರಾಮಾಯಣದಲ್ಲಿನ ಮೂಲವನ್ನು ಹಾಗೇ ಉಳಿಸಿಕೊಂಡು, ಆಧುನಿಕ ಸಂದರ್ಭಕ್ಕೆ ಅನುಗುಣವಾಗಿ, ಘಟನೆ ಹಾಗೂ ಪಾತ್ರಗಳನ್ನು ಡಾ. ಮೊಯಿಲಿಯವರು ತಮ್ಮ ಈ ಗ್ರಂಥದಲ್ಲಿ ಅಳವಡಿಸಿಕೊಂಡಿರುವುದೇ ಇದರ ವಿಶೇಷತೆ ಆಗಿರುವುದು ಎಂದು ಅವರು ಹೇಳಿದರು.

ಮಾತು ಮುಂದುರಿಸಿದ ಜಸ್ಟೀಸ್ ಅವರು, ರಾಮಾಯಣ ಕಥೆಗಳಲ್ಲಿ ಹಲವಾರು ಪೀಳಿಗೆಗಳಿಂದ ತುಳಿತಕ್ಕೆ ಒಳಗಾದ ಪುರುಷ ಮತ್ತು ಮಹಿಳೆಯರ ಸಂಗತಿಗಳು ಭಾರತೀಯ ಸಂಸ್ಕೃತಿಯಲ್ಲಿ ಅಳವಡಿಸಿಕೊಂಡಿವೆ ಎಂದರು. "ಶುದ್ಧ ಹಾಗೂ ಅನುಭವಿ ರಾಜಕಾರಣಿಯನ್ನು ನೋಡಿಲ್ಲ" ಆದರೆ, ನಾವು ದಿನನಿತ್ಯದ ಜೀವನದಲ್ಲಿ ಎಷ್ಟರಮಟ್ಟಿಗೆ ಈ ತತ್ವಗಳನ್ನು ಅಳವಡಿಸಿಕೊಳ್ಳುತ್ತೇವೆ? ಹಾಗಾದರೆ ನಾವು ಹೀಗೇಕೆ ಜಾತಿ, ಮತ, ಪಂಥಗಳ ಭೇದ ಭಾವಗಳನ್ನು ಈಗ ಮಾಡುತ್ತಿರುವೆವು? ನನಗೆ ಅನಿಸುವುದೇನೆಂದರೆ, ಈ ಎಲ್ಲ ವಿಚಾರಗಳನ್ನು ಮೊಯಿಲಿಯವರು ತಮ್ಮ ಈ ಗ್ರಂಥದಲ್ಲಿ ತುಂಬಾ ಚೆನ್ನಾಗಿ ಅಳವಡಿಸಿಕೊಂಡಿರುವುದೇ ಅವರ ವಿಶೇಷತೆ.

ಕೊನೆಯದಾಗಿ ಡಾ. ಮೊಯಿಲಿಯವರು ತಮಗೆ ಈ ಕಾರ್ಯದಲ್ಲಿ ಸಹಕರಿಸಿದ ಗುರುಗಳಾದ ಡಾ. ಕೆ. ಅನಂತರಾಮು, ಧರ್ಮಪತ್ನಿ ಶ್ರೀಮತಿ ಮಾಲತಿ ಹಾಗೂ ಇತರ ಸಂಶೋಧಕರಿಗೆ ಧನ್ಯವಾದಗಳನ್ನು ಅರ್ಪಿಸಿದರು.

— ಸರೋಜಾ ವಿಜಯಕುಮಾರ್

# ದೆಹಲಿ ಕನ್ನಡಿಗರಿಗೆ ಉಚಿತ ವೈದ್ಯಕೀಯ ಸೇವೆ ನೀಡುತ್ತಿರುವ ಡಾ. ಭೀಮಭಟ್



ದೆಹಲಿಯ ಸುಪ್ರಸಿದ್ಧ ಹೋಲಿ ಫ್ಯಾಮಿಲಿ ಆಸ್ಪತ್ರೆಯ ಆಯುರ್ವೇದ ವಿಭಾಗದ ನಿರ್ದೇಶಕ-ಚಿಕಿತ್ಸಕರೂ ಮತ್ತು ಕರ್ನಾಟಕ ಸಂಘದ ಆರೋಗ್ಯ ಸಮಿತಿಯ ಅಧ್ಯಕ್ಷರೂ ಆಗಿದ್ದ ಪ್ರಖ್ಯಾತ ಆಯುರ್ವೇದ ವೈದ್ಯ ಡಾ. ಭೀಮಭಟ್ಟರವರ ಪರಿಚಯ ಎಲ್ಲರಿಗೂ ಇದೆ. ಕರ್ನಾಟಕ ಸಂಘದ ಸದಸ್ಯರುಗಳಿಗೆ ಸುಮಾರು 25ವರ್ಷ ಇವರು ಮಾಡಿದ ಉಚಿತ ವೈದ್ಯಕೀಯ ಸಲಹಾ ಸೇವೆ ಸ್ಮರಣೀಯ. ಡಾ. ಭೀಮಭಟ್ಟರಿಗೆ 60 ವರ್ಷ ವಯಸ್ಸು, ಇವರು ಶಿವಮೊಗ್ಗ ಜಿಲ್ಲೆಯ ಆನವಟ್ಟಿ ಗ್ರಾಮದವರು. ಸಂಸ್ಕೃತ ವಿದ್ವಾಂಸರಾದ ಅವರ ತಂದೆಯವರ ಪ್ರೇರಣೆಯಂತೆ ಡಾ. ಭಟ್ಟರು ಬೆಂಗಳೂರು ವಿಶ್ವವಿದ್ಯಾಲಯದಿಂದ 1976ರಲ್ಲಿ ಆಯುರ್ವೇದದ ಪದವಿ ಪಡೆದು ನಂತರ ಗುಜರಾತ್ ವಿಶ್ವವಿದ್ಯಾಲಯ ಜಾಮನಗರದಿಂದ 1979ರಲ್ಲಿ ಎಂ.ಡಿ. (ಆಯುರ್ವೇದ) ಸ್ನಾತಕೋತ್ತರ ಪದವಿ ಪಡೆದರು. ಕಾಯಚಿಕಿತ್ಸೆ, ಪಂಚಕರ್ಮ ವಿಷಯಗಳಲ್ಲಿ ಅವರು ಪ್ರಥಮ ರ್‍ಯಾಂಕ್ ಪಡೆದು ಸುವರ್ಣ ಪದಕ ಗಳಿಸಿ ಕರ್ನಾಟಕಕ್ಕೆ ಹೆಮ್ಮೆ ತಂದವರು. 1979-80ರಲ್ಲಿ ದೆಹಲಿಯಲ್ಲಿ MML Centre for Rhumatic Disease ನಲ್ಲಿ ಮುಖ್ಯ ಚಿಕಿತ್ಸಕರಾಗಿ ಕೆಲಸ ಮಾಡಿ 1981-82ರಲ್ಲಿ ಕರ್ನಾಟಕದ ಬಳ್ಳಾರಿ ಆಯುರ್ವೇದ ಕಾಲೇಜಿನಲ್ಲಿ ಉಪನ್ಯಾಸಕರಾಗಿ ಸೇವೆ ಮಾಡಿದರು. 1983ರಿಂದ 1988ರವರೆಗೆ ಡಾ. ಭಟ್ಟರವರು ದೆಹಲಿಯ MML Centre for Rhumatic Diseases ಯಲ್ಲಿ ಜಂಟಿ ನಿರ್ದೇಶಕರಾಗಿ ಸೇವೆ ಸಲ್ಲಿಸಿದರು.

1989ರಲ್ಲಿ ಡಾ. ಭಟ್ಟರು ಹೋಲಿ ಫ್ಯಾಮಿಲಿ ಆಸ್ಪತ್ರೆಯಲ್ಲಿ ಆಯುರ್ವೇದ ವಿಭಾಗವನ್ನು ಸ್ಥಾಪಿಸಿ ವಿಭಾಗದ ಅಧ್ಯಕ್ಷರು ಮತ್ತು ಹಿರಿಯ ಚಿಕಿತ್ಸಕರೂ ಆಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಕಾಯಚಿಕಿತ್ಸೆ-ಪಂಚಕರ್ಮಗಳಿಂದ ಅನೇಕ ರೋಗಗಳ ಮೇಲೆ ಚಿಕಿತ್ಸೆ ಮತ್ತು ಶೋಧ ಕಾರ್ಯಗಳನ್ನು ಮಾಡಿ ಹೆಸರುವಾಸಿಯಾಗಿದ್ದಾರೆ. ಹಲವಾರು ಗಣ್ಯವ್ಯಕ್ತಿಗಳಿಗೆ ಡಾ.ಭಟ್ಟರವರು ಚಿಕಿತ್ಸಕರಾಗಿದ್ದಾರೆ. ದೇಶ ವಿದೇಶಗಳಲ್ಲಿ ಸುಮಾರು 80ಕ್ಕೂ ಹೆಚ್ಚು ಗೋಷ್ಠಿಯಲ್ಲಿ ಪಾಲ್ಗೊಂಡು ಅನೇಕ ಶೋಧಪತ್ರಗಳನ್ನು ಮಂಡಿಸಿದ್ದಾರೆ.

1994ರಿಂದ ಡಾ. ಭಟ್ಟರವರು ನಿರಂತರವಾಗಿ ವಿದೇಶಗಳಲ್ಲಿ ಮುಖ್ಯವಾಗಿ ಜಪಾನ್, ಬ್ರೆಜಿಲ್, ಲಂಡನ್, ಇಟಲಿ, ಒಮಾನ್, ಫ್ರಾನ್ಸ್, ಸ್ವೀಡನ್ ದೇಶಗಳಲ್ಲಿ ಆಯುರ್ವೇದದ ಮೇಲೆ ಉಪನ್ಯಾಸ ತರಬೇತಿ ಮತ್ತು ರೋಗಿಗಳಿಗೆ ಚಿಕಿತ್ಸೆ ನೀಡುತ್ತಾ ಬಂದಿದ್ದಾರೆ. ಜಪಾನಿನ ಗಿಫು ಸರ್ಕಾರ ಡಾ. ಭಟ್ಟರವರನ್ನು ಹೆಲ್ತ್ ಏಜೆನ್ಸಿ ಪ್ರೊಜೆಕ್ಟ್‌ನಲ್ಲಿ ಸಲಹಾಕಾರರನ್ನಾಗಿ ನೇಮಕ ಮಾಡಿದೆ. ಅಲ್ಲದೇ ಜಪಾನಿನ ಯೋಗ ನಿಕೇತನ ಸಂಸ್ಥೆ ಮತ್ತು ಆಯುರ್ವೇದ ಸೊಸೈಟಿ ಇನ್ ಜಪಾನ್ ಸಂಸ್ಥೆ ಡಾ. ಭಟ್ಟ ಅವರನ್ನು ಆಯುರ್ವೇದ ಎಜ್ಯುಕೇಶನ್ ಅಂಡ್ ರಿಸರ್ಚ್ ಗೆ ನಿರ್ದೇಶಕರನ್ನಾಗಿ ನೇಮಕ ಮಾಡಿದ್ದಾರೆ.

ವಿದೇಶಗಳಲ್ಲಿ ಆಯುರ್ವೇದದ ಬಗ್ಗೆ ಜ್ಞಾನ ಮತ್ತು ಅಭಿರುಚಿ ಹೆಚ್ಚುತ್ತಿದೆ ಎಂದು ತಿಳಿಸುವುದರಲ್ಲಿ ಡಾ. ಭಟ್ಟರವರು ಸಂತೋಷಪಡುತ್ತಾರೆ. ಡಾ. ಭಟ್ಟರವರು ದೇಶ-ವಿದೇಶಗಳಲ್ಲಿ ಅನೇಕ ಬಿರುದು-ಪಾರಿತೋಷಕಗಳನ್ನು ಪಡೆದಿದ್ದಾರೆ. ಅವುಗಳಲ್ಲಿ ಪ್ರಮುಖವಾಗಿ Capt. G. Srinivas Murthy Scientist Gold Medal, Pranachaya, ಧನ್ವಂತರಿ, ಆಯುರ್ವೇದ ಕುಲಭೂಷಣ, ಅತ್ಯುತ್ತಮ ಆಯುರ್ವೇದ ಜನತಾ ಸೇವೆ ಬಿರುದು, ವಿದೇಶಗಳಲ್ಲಿ ಆಯುರ್ವೇದ ಪ್ರಚಾರ ಪ್ರಶಂಸಾ ಬಿರುದುಗಳಾಗಿವೆ.

ದೆಹಲಿ ಕರ್ನಾಟಕ ಸಂಘದ ಮುಖಪತ್ರಿಕೆ ಅಭಿಮತದಲ್ಲಿ 'ಆರೋಗ್ಯವೇ ಭಾಗ್ಯ' ಅಂಕಣವನ್ನು ಬರೆಯುತ್ತಿದ್ದ ಶ್ರೀ ಭೀಮ ಭಟ್ಟರದು ಸರಳ ಸಜ್ಜನಿಕೆಯ ವ್ಯಕ್ತಿತ್ವ. ದೆಹಲಿಯ ಕನ್ನಡ ಚಟುವಟಿಕೆಗಳಲ್ಲಿ ಸಕ್ರಿಯರು.

**— ವಸಂತ ಶೆಟ್ಟಿ ಬೆಳ್ಳಾರೆ**

## ಅಭಿನಂದನೆ



ದೆಹಲಿ ಕರ್ನಾಟಕ ಸಂಘದ ಸದಸ್ಯರಾದ ಡಿ. ಜಿ.ಆರ್. ಇನಾಮದಾರರ ಮೊಮ್ಮಗಳು ಹಾಗೂ ಶಿರೀಶ ಮತ್ತು ಸವಿತಾ ಇನಾಮದಾರರ ಮಗಳಾದ ಕು. ಸುರಭಿ ಇನಾಮದಾರ್ ಇತ್ತೀಚೆಗೆ ಜರುಗಿದ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ 10 ಸಿ.ಜಿ.ಪಿ.ಎ. (Cumulative grade point average) ಪಡೆದು ಹೊಸ-ದೆಹಲಿಯ ಸೈಂಟ್ ಮಾರ್ಕ್ಸ್ ಸೀನಿಯರ್ ಸೆಕೆಂಡರಿ ಪಬ್ಲಿಕ್ ಸ್ಕೂಲ್‌ನಲ್ಲಿ ಪ್ರಥಮ ಸ್ಥಾನವನ್ನು ಪಡೆದಿದ್ದಾಳೆ. ವಿದ್ಯಾಭ್ಯಾಸದ ಜೊತೆಗೆ ಶಾಲೆಯ ಇತರ ಚಟುವಟಿಕೆಗಳಲ್ಲಿ ಭಾಗವಹಿಸಿ ಬಹುಮಾನಗಳನ್ನು ಪಡೆದು ಶಾಲೆಗೆ ಮತ್ತು ಹೆತ್ತವರಿಗೆ ಹೆಮ್ಮೆಯನ್ನು ತಂದಿದ್ದಾಳೆ. ನೃತ್ಯದಲ್ಲೂ ಅಭಿರುಚಿಯನ್ನು ಹೊಂದಿರುವ ಸಂಘದ ಅನೇಕ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡಿದ್ದಾಳೆ. ಕು. ಸುರಭಿಗೆ ಹಾರ್ದಿಕ ಅಭಿನಂದನೆಗಳು.


With Best Compliments

**Nayak Aviation Services Private Limited**

International & Domestic Freight Forwarders.

***Corporate Office: L-333, Mahipalpur Extension, New Delhi – 110037,***

***Ph# 011-26781131/32***

***email:info@nayakaviation.com***

***Branches at : Ahmedabad, Bengaluru, Chennai, Gauhati, Hyderabad, Kolkata, Mumbai, Pune***

***Singapore, HongKong.***

# A
# Well Wisher
# From
# New Delhi



Delhi Karnataka Sangha's Abhimatha Monthly,
July 2010, Price Rs.1/- RNI Regn. No. 53405/91, DL-SW-15/4016/10-11-12
Printout Date : July 8th / 9th, Postal Date :10th / 11th, Total Pages-20




Editor: Vasantha Shetty Bellare, Printed & Published by R. Renu Kumar, General Secretary on behalf of Delhi Karnataka Sangha (R), Rao Tularam Marg, Sector-12, R.K.Puram, New Delhi-110022, Tel: 26109615 and printed at R.V. Printing Press, C-97, Okhla Industrial Area, Phase-I, New Delhi-110020, Tel: 26815778, 40545298,